
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ: 12 ಸಂಚಿಕೆ 21 ಮೇ 27, 1990 ರೂ. 1-50



ಕಾಂಗ್ರೆಸ್(ಐ) ದುರಾಡಳಿತದ ವಿರುದ್ಧ ರಾಜ್ಯವ್ಯಾಪಿ ಚಳುವಳಿ ಆರಂಭ

ನಾಲ್ಕು ವಿರೋಧ ಪಕ್ಷಗಳ ಕರೆಯ ಮೇರೆಗೆ ಕಾಂಗ್ರೆಸ್(ಐ) ರಾಜ್ಯ ಸರ್ಕಾರ ವಿಪರೀತವಾಗಿ ಏರಿಸಿದ ಬಸ್ ಪ್ರಯಾಣ ದರಗಳನ್ನು ಇಳಿಸಲು, ರೈತರ ಸಾಲ ಮನ್ನಾ ಮಾಡುವಲ್ಲಿ ತನ್ನ ಪಾಲು ನೀಡಲು ನಿರಾಕರಿಸುತ್ತಿರುವುದನ್ನು ಪ್ರತಿಭಟಿಸಲು ರಾಜ್ಯಾದ್ಯಂತ ಧರಣಿ ಸತ್ಯಾಗ್ರಹ ನಡೆಯಿತು. ವೀರೇಂದ್ರ ಪಾಟೀಲ ಸರ್ಕಾರ ತನ್ನ ಜನ-ವಿರೋಧಿ ದುಷ್ಕೃತ್ಯವನ್ನು ಬಿಡದಿದ್ದರೆ ಜನತೆ ಉಗ್ರ ಹೋರಾಟಕ್ಕೆ ಸಿದ್ಧವಾಗುವ ಎಚ್ಚರಿಕೆಯನ್ನು ನೀಡಲಾಯಿತು.

ರಾಜಧಾನಿ ಬೆಂಗಳೂರಿನಲ್ಲಿ ವಿಧಾನ ಸೌಧದೆದುರು ಬೆಳಗ್ಗೆ 10 ಗಂಟೆಗೆ ಆರಂಭವಾದ ಧರಣಿ ಸತ್ಯಾಗ್ರಹದಲ್ಲಿ, ಈ ಸತ್ಯಾಗ್ರಹಕ್ಕೆ ಕರೆ ನೀಡಿದ ಜನತಾ ದಳ, ಸಿ.ಪಿ.ಐ(ಎಂ), ಸಿ.ಪಿ.ಐ. ಜನತಾ ಪಕ್ಷ (ಜೆ.ಪಿ.)ಯ ರಾಜ್ಯ ಮುಖಂಡರಲ್ಲದೆ ಡಿ.ಎಂ.ಕೆ. ಮುಖಂಡರೂ, ನೂರಾರು ಕಾರ್ಯಕರ್ತರು ಭಾಗವಹಿಸಿದರು. ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್, ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಎನ್.ಕೆ. ಉಪಾಧ್ಯಾಯ ಹಾಗೂ ಸಿ. ನಂಜುಂಡಪ್ಪ ಈ ಧರಣಿಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್(ಐ) ದುರಾಡಳಿತ ವಿರುದ್ಧ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿದ ಅದರ ಜನ ವಿರೋಧಿ ನಿಲುವಿನ ವಿರುದ್ಧ ರಾಜ್ಯವ್ಯಾಪಿ ಚಳುವಳಿ ಆರಂಭವಾಗಿದೆ ಎಂದು ಘೋಷಿಸಿದರು. ಧರಣಿ ಸತ್ಯಾಗ್ರಹಿಗಳನ್ನು ಹಾಗೂ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಸಿ.ಪಿ.ಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಎಸ್. ಸೂರ್ಯನಾರಾಯಣರಾವ್, ವೀರೇಂದ್ರ ಪಾಟೀಲರು ವಿಧಾನ ಸೌಧದಲ್ಲಿರಬಹುದು. ಆದರೆ ನಾವು ಜನರ ಮಧ್ಯೆ ಇದ್ದೇವೆ. ವಿರೋಧ ಪಕ್ಷಗಳ ನಡುವೆ ಚುನಾವಣೆಗಳ ಸಮಯದಲ್ಲಿದ್ದ ಅನೈಕ್ಯತೆ ಹೋಗಿ ಈಗ ಮತ್ತೆ ಜನತೆಯ ಹಿತಾಸಕ್ತಿಗಳ ರಕ್ಷಣೆಗೆ ಐಕ್ಯ ಚಳುವಳಿ ಮೂಡಿ ಬರುತ್ತಿದೆ ಎನ್ನುತ್ತಾ ಜನ ತಿರುಗಿಬಿದ್ದರೆ ಪಾಟೀಲರ ಪೋಲೀಸರೂ ಸಾಕಾಗಲಿಕ್ಕಿಲ್ಲ ಎಂದು ಎಚ್ಚರಿಸಿದರು. ಕೆ.ಎಸ್.ಆರ್.ಟಿ.ಸಿ. ನೌಕರರು, ಕಾರ್ಖಾನೆ ಕಾರ್ಮಿಕರು, ರೈತರು ಹೋರಾಟಕ್ಕೆ ಧುಮುಕಬೇಕೆಂದು ಕರೆ ನೀಡಿದರು. ಜನಶಕ್ತಿಗೆ, ಸಾರ್ವಜನಿಕ ಅಭಿಪ್ರಾಯಕ್ಕೆ ತಲೆಬಾಗಿ ನೆಲ್ಸನ್ ಮಂಡೇಲಾರ ಬಿಡುಗಡೆಯಾಗಿರುವಾಗ ವೀರೇಂದ್ರ ಪಾಟೀಲ ರದ್ದೇನು ಲೆಕ್ಕ ಎಂದ ಕಾಂ. ಸೂರಿ, ವಿರೋಧ ಪಕ್ಷಗಳ ಮುಖಂಡರು, ಕಾರ್ಯಕರ್ತರು ಮುಂದಿನ ಘಟ್ಟದ ಹೋರಾಟಕ್ಕೆ ಕರ್ನಾಟಕ ಬಂದ್ ನಡೆಸಲು ಜನರನ್ನು ಅಣಿನೆರೆಸಲು ಈಗಲೇ ಮುಂದಾಗಬೇಕು ಎಂದರು. ಸಿ.ಪಿ.ಐ(ಎಂ) ಹಾಗೂ ಸಿ.ಪಿ.ಐ. ನೇತೃತ್ವದ ಸಂಘಟಿತ ಕಾರ್ಮಿಕರು, ನೌಕರರು, ರೈತರು, ಯುವಜನ ವಿದ್ಯಾರ್ಥಿಗಳು ಈ ಹೋರಾಟದಲ್ಲಿ ಪೂರ್ಣವಾಗಿ ಧುಮುಕುತ್ತಾರೆಂದುಆಶ್ವಾಸನೆ ನೀಡಿದರು.

ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾಯರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ರೈತರ ಸಾಲ ಮನ್ನಾ ಬೇಡಿಕೆಯ ಹಿನ್ನೆಲೆಯನ್ನು ವಿವರಿಸಿ ರೈತರಿಗೆ ಫಲದಾಯಕ ಬೆಲೆ ನೀಡಿದ ಕಾಂಗ್ರೆಸ್‌ನ ರೈತ-ವಿರೋಧಿ ನೀತಿಗಳಿಂದಾಗಿ ಈ ಬೇಡಿಕೆ ಎದ್ದಿದೆ ಎಂದರು.

ಬಸ್‌ದರ ಏರಿಕೆಗೆ ಕಾಂಗ್ರೆಸ್ ಸರ್ಕಾರ ಕೊಡುವ ಕಾರಣಗಳು ಕೇವಲ ಮೋಸ ಎಂದು ವಿವರಿಸಿದ ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ಎಂ.ಎಸ್.ಕೃಷ್ಣನ್ ಬೇರೆ ರಾಜ್ಯಗಳಲ್ಲಿ ರಾಜ್ಯ ಸಾರಿಗೆ ಸಂಸ್ಥೆಗಳ ಮೇಲೆ 3.5 ರಿಂದ 7 ಶೇಕಡಾ ತೆರಿಗೆ ಹಾಕಿದರೆ, ನಮ್ಮ ರಾಜ್ಯದಲ್ಲಿ 17% ತೆರಿಗೆ ಹಾಕಿರುವುದೇ ಕೆ.ಎಸ್.ಆರ್.ಟಿ.ಸಿ.ಯ ವಿಪರೀತ ಖರ್ಚಿಗೆ ಕಾರಣ ಎಂದರು. ಇದೇ ಕಾರಣವೊಡ್ಡಿ ಸಾರಿಗೆ ಖಾಸಗೀಕರಣದ ಪ್ರಯತ್ನ ನಡೆಯುತ್ತಿದೆ ಎಂದೂ ಅವರು ಹೇಳಿದರು. ಕೇಂದ್ರ ಸರ್ಕಾರ 50% ನೆರವು ನೀಡಿದರೂ ಸಾಲಮನ್ನಾ ಮಾಡಲು ನಿರಾಕರಿಸುವುದು ನಾಚಿಕೆಗೇಡು ಎಂದರು.

ಧರಣಿ ಕೂತವರನ್ನುದ್ದೇಶಿಸಿ ಜನತಾ ದಳದ ಮುಖಂಡರಾದ ವಿ.ಎಸ್. ಕೃಷ್ಣ ಅಯ್ಯರ್, ಸಿದ್ಧರಾಮಯ್ಯ ಡಿ.ಬಿ.ಚಂದ್ರೇಗೌಡ ಮಾಜಿ ಸಾರಿಗೆ ಮಂತ್ರಿ ಸಿಂಧ್ಯಾ ಮುತ್ತಿತರರು, ಜನತಾ ಪಕ್ಷ(ಜೆ.ಪಿ.)ದ ಭೈರೇಗೌಡರು ಮಾತನಾಡಿ ಕಾಂಗ್ರೆಸ ಜನ-ವಿರೋಧಿ ನೀತಿಗಳನ್ನು, ಗೋಸುಂಬೆತನವನ್ನು, ಮುಖ್ಯ ಮಂತ್ರಿಗಳ ಅಹಂಕಾರವನ್ನು ಟೀಕಿಸಿ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ ಎಂದರು. ಬೆಂಗಳೂರಿನ ವಯೋವೃದ್ಧ ಮುಖಂಡ ಟಿ.ಆರ್. ಶಾಮಣ್ಣನವರು ಸತ್ಯಾಗ್ರಹಗಳನ್ನುದ್ದೇಶಿಸಿ ಮಾತನಾಡಿದರು.

ಚಿರಸ್ಮರಣೀಯ ಕಾಂ. ಎನ್ನೆಲ್

ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯ ಆದ್ಯ ಪ್ರವರ್ತಕರಲ್ಲಿ ತಲೆಮಣಿಯಾದ ಕಾಂ. ಎನ್.ಎಲ್. ಉಪಾಧ್ಯಾಯರು ನಿಧನರಾಗಿ ಮೇ ಕ್ಕೆ ಒಂದು ವರ್ಷ ಸಂದಿತು. ಕಾಂ. ಎನ್ನೆಲ್‌ರವರನ್ನು ಸ್ಮರಿಸುವುದೆಂದರೆ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿವನ್ನು ನೆನೆಪಿಸಿಕೊಂಡಂತೆ.


ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಕಾಂ. ಎನ್ನೆಲ್ ಧುಮುಕಿದ್ದೇ ಅತ್ಯಂತ ಕಷ್ಟದ ದಿನಗಳಲ್ಲಿ ಎರಡನೆಯ ಮಹಾಯುದ್ಧದ ಸಮಯದಲ್ಲಿ ನಮ್ಮ ಪಕ್ಷ ತನ್ನ ಸರಿಯಾದ ನಿಲುವಿಗಾಗಿ ಸ್ವಾತಂತ್ರ್ಯ ಪ್ರೇಮಿ ಜನತೆಯ ಅಪ್ರೇಮಕ್ಕೆ ಒಳಗಾಗಿದ್ದ ಕಾಲ. ಸಮಾಜವಾದಿಗಳು, ಕಾಂಗ್ರೆಸ್ ನಾಯಕರು ದಿನನಿತ್ಯ ದೂಷಿಸುತ್ತಾ ಜನತೆಯಿಂದ ನಮ್ಮನ್ನು ಪ್ರತ್ಯೇಕಗೊಳಿಸಲು ತೀವ್ರ ಯತ್ನ ನಡೆಸುತ್ತಿದ್ದ ಕಾಲ. ಇಂತಹ ಕಾಲದಲ್ಲಿ ಜನರನ್ನು ಒಲಿಸಿಕೊಂಡು ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವ ಗುರುತರ ಜವಾಬ್ದಾರಿ, ವಿವಿಧ ಜನ ವಿಭಾಗಗಳನ್ನು ಸಂಘಟಿಸುವ ಜವಾಬ್ದಾರಿ ಇವರ ಹೆಗಲ ಮೇಲಿತ್ತು.

ಮೈಸೂರು ಸಂಸ್ಥಾನದ ಪಾಳೆಯಗಾರಿ ದಬ್ಬಾಳಿಕೆಯ, ತುಳಿತವನ್ನು ಬ್ರಿಟಿಷ್ ಸರ್ಕಾರದ ದಮನವನ್ನು ಎದುರಿಸಿ, ಈ ಕಾರ್ಯವನ್ನು ನಿರ್ವಹಿಸಿದ ಯಶಸ್ಸು ಕಾಂ. ಎನ್ನೆಲ್‌ರವರದು.

ಅಂದು ಬೆಂಗಳೂರಿನಲ್ಲಿ, ಕೆಜಿಎಫ್‌ನಲ್ಲಿ, ಹುಬ್ಬಳ್ಳಿಯಲ್ಲಿ ದಾವಣಗೆರೆಯಲ್ಲಿ ಕಾರವಾರದ ರೈತರ ಸಮುದಾಯದ ನಡುವೆ ಸಾವಿರಾರು ಕೈಗಳು ಕೆಂಬಾವುಟವನ್ನು ಎತ್ತಿ ಹಿಡಿಯುವ, ಅದಕ್ಕಾಗಿ ದುಡಿಯುವ ಪಣತೊಟ್ಟದ್ದರೆ ಅವರ ಮುಖ್ಯ ಪಾಲು ಕಾಂ. ಎನ್ನೆಲ್‌ರವರಿಗೆ ಸೇರಿದ್ದು.

ಅಂದು ಕರ್ನಾಟಕಕ ಏಕೀಕರಣ ಹೋರಾಟದಲ್ಲಿ ಮೈಸೂರಿನಲ್ಲಿಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿ ಎಂಬ ಘೋಷಣೆಗಾಗಿ ನಡೆದ "ಮೈಸೂರ್ ಚಲೋ"ದಲ್ಲಿ ಮಹಾಯುದ್ಧ ನಂತರ ನಡೆದ ಕಾರ್ಮಿಕರ, ರೈತರ ಹೋರಾಟಗಳಲ್ಲಿ "ಕೆಂಬಾವುಟ" ಪ್ರಜ್ವಲಿಸಿದ್ದರೆ ಅದರಲ್ಲಿ ಕಾಂ. ಎನ್ನೆಲ್‌ರವರ ತ್ಯಾಗವನ್ನು ಗುಣಿಸಬೇಕು.

ಕರ್ನಾಟಕದಲ್ಲಿ ಪ್ರಥಮವಾಗಿ ಕಮ್ಯುನಿಸ್ಟ್ ಪತ್ರಿಕೋದ್ಯಮವನ್ನು ಆರಂಭಿಸಿ ಅದಕ್ಕೆ ಚೈತನ್ಯ ನೀಡಿದ ಕಾಂ. ಎನ್ನೆಲ್‌ರವರನ್ನು "ಐಕ್ಯರಂಗ" ಸ್ಮರಿಸುತ್ತದೆ.



ಒಳ ಪುಟಗಳಲ್ಲಿ -

ಖಗೋಳ ವಿಜ್ಞಾನದಲ್ಲಿ ಎರಡನೇ ಕ್ರಾಂತಿ

ಗೆಲಿಲಿಯೋ ಟೆಲಿಸ್ಕೋಪ್ (ದೂರದರ್ಶಕ)ವನ್ನು ಗಗನದ ಕಡೆಗೆ ತಿರುಗಿಸಿದಾಗ ಖಗೋಳವಿಜ್ಞಾನದಲ್ಲಿ ಮೊದಲ ಕ್ರಾಂತಿ ಆಗಿತ್ತು. ಅದು ಖಗೋಳ ವಿಜ್ಞಾನಕ್ಕೆ ಸೀಮಿತವಾಗಲಿಲ್ಲ. ಎಲ್ಲಾ ವಿಜ್ಞಾನಿಗಳಿಗೂ ಮಾನವನ ಜೀವನದ ಬಗ್ಗೆ, ತತ್ವಜ್ಞಾನ ದೃಷ್ಟಿಕೋನವನ್ನೇ ಬದಲಾಯಿಸಿತು. ಅದೇ ರೀತಿಯ ಎರಡನೆಯ ಕ್ರಾಂತಿಯ ಹೊಸಿಲಲ್ಲಿ ನಾವು ಈಗ ಇದ್ದೇವೆ ಎನ್ನಲಾಗಿದೆ. ಸಂದರ್ಭ ಕಳೆದ ತಿಂಗಳು ಉಡಾಯಿಸಲಾದ ಹಬಲ್ ಟೆಲಿಸ್ಕೋಪನ್ನು ಬಾಹ್ಯಾಕಾಶದಲ್ಲಿ ಸ್ಥಾಪಿಸಿದ್ದು. (ಹಬಲ್ ಪ್ರಖ್ಯಾತ ಖಗೋಳವಿಜ್ಞಾನಿ. ಇನ್ನೂ ನಾಲ್ಕು ಇಂತಹ ಟೆಲಿಸ್ಕೋಪನ್ನು ಬಾಹ್ಯಾಕಾಶಕ್ಕೆ ಹಾರಿಬಿಡಲಾಗುತ್ತದೆ, ಕೆಲವು ವರ್ಷಗಳಲ್ಲಿ.

ಭೂಮಿಯ ಮೇಲೆ ಭಾರಿ ಭಾರೀ ಟೆಲಿಸ್ಕೋಪು ಇರುವಾಗ ಬಾಹ್ಯಾಕಾಶದಲ್ಲಿ ಟೆಲಿಸ್ಕೋಪು ಯಾಕೆ ಎಂದು ಯಾರಾದರೂ ಕೇಳಬಹುದು. ಭೂಮಿಯ ಸುತ್ತ ಇರುವ ವಾತಾವರಣದ ಕವಚ ಮಾನವ ಸಮುದಾಯದ ಇರವಿಗೆ ಅತ್ಯವಶ್ಯಕ ಹೌದಾದರೂ, ಖಗೋಳದಿಂದ ಬರುವ ಹಲವಾರು ರೇಡಿಯೋ ತರಂಗಗಳನ್ನು ತಡೆಯುತ್ತದೆ. ಕೆಲವು ತರಂಗಾಂತರ (frequency) ರೇಡಿಯೋ ತರಂಗಗಳನ್ನು ಉಪಯೋಗಕ್ಕೆ ಬಾರದಷ್ಟು ಕ್ಷೀಣಗೊಳಿಸುತ್ತದೆ ವಿಕೃತಗೊಳಿಸುತ್ತದೆ. ಖಗೋಳದ ಬಗ್ಗೆ ಎಷ್ಟೋ 'ವೀಕ್ಷಣೆಗಳು'' ಇದರಿಂದಾಗಿ ಸಾಧ್ಯವಾಗದೇ ಹೋಗುತ್ತದೆ. ಈವರೆಗೆ ವಿಶ್ವದ ಹುಟ್ಟಿನ ಬೆಳವಣಿಗೆ ಬಗ್ಗೆ ನಮಗೆ ಇರುವ ವೈಜ್ಞಾನಿಕ ಜ್ಞಾನ ಈ ರೀತಿಯಲ್ಲಿ ಅಪೂರ್ಣ.

ಇದು ಎಲ್ಲಾ ಬಣ್ಣವನ್ನು ನುಂಗಿ ಬಿಡುವ ಒಂದು ಬಣ್ಣದ ಕನ್ನಡಕವನ್ನು ಹಾಕಿಕೊಂಡು ಪ್ರಕೃತಿಯ ಬಣ್ಣಗಳ ಬಗ್ಗೆ ಬಣ್ಣಿಸಿದಂತೆ. ರೇಡಿಯೋ ತರಂಗಾಂತರಗಳಲ್ಲಿ ಹಲವು ವಿಧಗಳಿರುತ್ತವೆ. ರೇಡಿಯೋದ, ಟಿವಿಯ, ರಾಡರ್‌ಗಳು ಕೆಲಸಮಾಡುವ ತರಂಗಾತರಗಳು ಬೇರೆ ಬೇರೆ. ಬೇರೆ ಬೇರೆ ತರಂಗಾತರಗಳಲ್ಲಿ ಉಪಕರಣಗಳು ಬೇರೆ ಇರಬೇಕಾಗುತ್ತದೆ ಈಗ ಬಾಹ್ಯಾಕಾಶಕ್ಕೆ ಹಾರಿಬಿಡಬೇಕೆಂದಿರುವ ಟೆಲಿಸ್ಕೋಪ್‌ಗಳು ಬೇರೆ ಬೇರೆ ರೊಡಿಯೋ ತರಂಗಾಂತರಗಳಲ್ಲಿ ಬಾಹ್ಯಾಕಾಶ ವೀಕ್ಷಣೆ ಮಾಡುತ್ತವೆ. ಈ ಬಾಹ್ಯಾಕಾಶ ಟೆಲಿಸ್ಕೋಪ್‌ಗಳನ್ನು ಭೂಮಿಯ ಮೇಲಿಂದ ನಿಯಂತ್ರಿಸಲಾಗುತ್ತದೆ. ಟೆಲಿಸ್ಕೋಪ್ ಪಡೆದ ರೇಡಿಯೋ 'ಚಿತ್ರ' ಅದು ಭೂಮಿಗೆ ಕಳಿಸುತ್ತದೆ.

ಏರ್‌ಬಸ್ ದುರಂತ

ಆಧುನಿಕ ತಂತ್ರಗಳಲ್ಲಿನ ಇನ್ನೊಂದು ಬಾರಿ ವಿವಾದಕ್ಕೊಳಗಾಗಿದೆ. ಬೊಂಬಾಯಿಂದ ಬೆಂಗಳೂರಿಗೆ ಬರುತ್ತಿದ್ದ ಏರ್ ಬಸ್ A-320 ವಿಮಾನ ನಿಲ್ದಾಣದ ಹತ್ತಿರ ಬರುತ್ತಿರುವಾಗಲೇ ಕೆಲವು ಮೀಟರುಗಳು ಎತ್ತರ, ದೂರದಲ್ಲೇ ಕುಸಿದು ನೆಲಕ್ಕಪ್ಪಳಿಸಿ ಭಾರೀ ಸಾವು ನೋವಿಗೆ ಎಡೆಮಾಡಿಕೊಟ್ಟಿತು. ಈ ವಿಮಾನ ಫ್ರಾನ್ಸ್ ಏರ್ ಬಸ್ ಕಂಪನಿ ವಿನ್ಯಾಸ ಮಾಡಿ ತಯಾರಿಸಿರುವ A-320 ಎಂಬ ಮಾಡಲ್‌ನದ್ದು ಈ ವಿಮಾನದಲ್ಲಿ ಹಿಂದಿನ ವಿಮಾನಗಳಿಗೆ ಹೋಲಿಸಿದರೆ. ಇಂಜೀನ್ ಮತ್ತು ಹಾರಾಟಕ್ಕೆ ಉಪಯೋಗಿಸುವ ಇತರ ಯಂತ್ರಗಳನ್ನು ನಿಯತ್ರಿಸುವ ತಂತ್ರಜ್ಞಾನವನ್ನು ಆಧುನಿಕೀಕರಿಸಲಾಗಿದೆ. ಹಿಂದಿನ ವಿಮಾನಗಳಲ್ಲಿ ಈ ನಿಯಂತ್ರಣ ನೇರವಾಗಿರುತ್ತದೆ ಉದಾ: ಎಲ್ಲಾ ವಿಮಾನಗಳಲ್ಲಿ ಇದ್ದಂತೆ ಗೇರ್ ಬದಲಾಯಿಸುವುದು, ಬ್ರೇಕ್ ಹಾಕುವುದು ನೇರವಾಗಿ ಯಾಂತ್ರಿಕವಾಗಿ ಆ ಕೆಲಸಗಳನ್ನು ಮಾಡುತ್ತದೆ ಆದರೆ A-320 ವಿಮಾನಗಳಲ್ಲಿ ಇದನ್ನು ಕಂಪ್ಯೂಟರ್‌ಗಳು ಮಾಡುತ್ತವೆ. ಪೈಲಟ್ ಉಪಯೋಗಿಸುವ ಸಾಧನಗಳು ಕಂಪ್ಯೂಟರ್‌ಗೆ ಆಜ್ಞೆ ಕೊಡುತ್ತವೆ. ಕಂಪ್ಯೂಟರ್ ಆ ಆಜ್ಞೆಯನ್ನು ಇಂಜೀನ್ ಮತ್ತು ಇತರ ಯಂತ್ರಗಳ, ಸಾಮರ್ಥ್ಯದ ಪರಿಮಿತಿಯೊಳಗೆ ಕಾರ್ಯಗತಮಾಡುತ್ತದೆ. ಕಂಪ್ಯೂಟರ್ ನಿಯತ್ರಣದ ಪ್ರಯೋಜನವೆಂದರೆ ಇಂಜೀನ ಮತ್ತು ಇತರ ಯಂತ್ರಗಳಿಗೆ ಘಾಸಿ ಮಾಡಬಲ್ಲ ತಪ್ಪು ಚಲನವಲನಗಳಿಗೆ ಆಜ್ಞೆ ಕೊಡುವುದನ್ನು ತಪ್ಪಿಸುವುದು. ಆಯಾ ಸಂದರ್ಭಗಳಿಗೆ ತಕ್ಕ ಚಲನವಲನಗಳನ್ನು ತಾನೇ ನಿರ್ವಹಿಸುವ ಮೂಲಕ ಪೈಲಟ್ ಮೇಲಿನ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವುದು

ಆದರೆ ಬೆಂಗಳೂರು ಅಪಘಾತದಲ್ಲಿ ಪ್ರಶ್ನೆಗೊಳಗಾಗಿರುವುದು ಹಲವು ತಾಂತ್ರಿಕ ವಿಷಯಗಳು. ಅಷ್ಟೇನು ತಾಂತ್ರಿಕವಲ್ಲದ ವಿಷಯಗಳು ಮೊದಲನೆಯದಾಗಿ ಇಂತಹ ಹೊಸ ವಿಜ್ಞಾನ ಸರಿಯಾದ ಪರೀಕ್ಷಣೆಗೆ ಒಳಪಡಿಸಲಾಗಿದೆಯೇ ಇಂಜೀನ್ ಕೆಟ್ಟುಹೋಗುವುದು ಮುಂತಾದ ಆಪತ್ಕಾಲದಲ್ಲಿ ಈ ರೀತಿಯ ನಿಯಂತ್ರಣ ಸರಿಯಾಗಿ ಪ್ರತಿಸ್ಪಂದಿಸುತ್ತಿದೆಯೇ ಅಥವಾ ವಿನ್ಯಾಸ ಎಲ್ಲವೂ ಸರಿಯಾಗಿದ್ದು ಇದು ಕಂಪ್ಯೂಟರ್‌ಗಳು ಕೆಟ್ಟುಹೋಗಿರುವುದೇ? ಇಲ್ಲಿ ತಾಂತ್ರಿಕ ನಿರ್ಧಾರ ಇನ್ನೂ ಆಗಿಲ್ಲ.

ಈ ವಿಚಾರಣೆ ನಡೆಯುತ್ತಿರುವಂತೆ ಏರ್ ಬಸ್ ಕಂಪನಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಇಂಡಿಯನ್ ಏರ್‌ಲೈನ್ಸ್ ಮೇಲೆ ಹಾಕಲು ಪಿತೂರಿ ನಡೆಸುತ್ತಿದೆ. ಪೈಲಟ್‌ಗಳ ಮೇಲೆ ವಿಮಾನ ನಿಲ್ದಾಣಗಳ ಮೇಲೆ ನಿರ್ವಹಣೆಯ ಮೇಲೆ ಗೂಬೆ ಕೂರಿಸಲು ಪ್ರಯತ್ನಿಸುತ್ತಿದೆ. ಈ ಪಿತೂರಿಯನ್ನು ಎದುರಿಸಿ, ನಿಜವಾದ ಕಾರಣ ಹುಡುಕಿ ಅದನ್ನು ಸಾರ್ವನಿಕ ಗೊಳಿಸುವುದು ಸರ್ಕಾರದ ಕರ್ತವ್ಯ. ಮಾಹಿತಿ ಪಡೆಯುವ ನಾಗರೀಕನ ಹಕ್ಕಿನ ಬಗ್ಗೆ ಮಾತನಾಡುತ್ತಿರುವ ಸರ್ಕಾರ ಈ ವಿಷಯದಲ್ಲಿ ಅದನ್ನು ಕಾರ್ಯಗತಮಾಡಬೇಕು.

ಭೂಮಿ ರಕ್ಷಾಕವಚದಲ್ಲಿ 'ತೂತು'

ಭೂಮಿಯ ವಾತಾವರಣದಲ್ಲಿ ಓಝೋನ್ ಕವಚಕ್ಕೆ ಬಹಳ ಮಹತ್ವವಿದೆ. ಇಡೀ ಮನುಕುಲ ಎದುರಿಸುತ್ತಿರುವ ಪ್ರಮುಖ ಪರಿಸರ ಸಮಸ್ಯೆಗಳಲ್ಲಿ ಒಂದು. ಈ ಓಝೋನ್ ಕವಚದಲ್ಲಿ ಒಂದು ಕಡೆ ತೂತು ಬಿದ್ದಿರುವುದು. ಇದು ಮುಂದುವರಿದರೆ ಭಾರಿ ಅಪಾಯ

ಕಾದಿದೆ. ಇದಕ್ಕೆ ಕಾರಣ ವಿಜ್ಞಾನಿಗಳ ಪ್ರಕಾರ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿರುವ ವಿಶಿಷ್ಟ ರಾಸಾಯನಿಕ - ಕ್ಲೋರೋಫ್ಲೋರೋ ಕಾರ್ಬನ್ ಇವನ್ನು ಏರ್ ಕಂಡೀಷನರ್‌ಗಳಲ್ಲಿ, ಇಲೆಕ್ಟ್ರಾನಿಕ್ಸ್ ಅರೆವಾಹಕ ಬಿಡಿ ಭಾಗಗಳ ತಯಾರಿಕೆಯಿಲ್ಲ ತೊಳೆಯುವ ರಾಸಾಯನಿಕವಾಗಿ ಭಾರೀ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಈ ಉಪಯೋಗಗಳಲ್ಲಿ ಬದಲಿ ರಾಸಾಯನಿಕ ಕಂಡುಹಿಡಿಯುವುದು ತುರ್ತಿನ ವೈಜ್ಞಾನಿಕ ಪ್ರಶ್ನೆ. ಅದನ್ನು ಆ ಕೈಗಾರಿಕೆಗಳಲ್ಲಿ ಬಳಕೆ ತರುವುದು ಆರ್ಥಿಕ ಸಾಮಾಜಿಕ

ಪ್ರಶ್ನೆ ಸಹ. ಆದ್ದರಿಂದ ವಿಶ್ವ ಸಂಸ್ಥೆ ನೂರು ಮಿಲಿಯನ್ ಡಾಲರು ಗಳು ನಿಧಿ ಸಂಗ್ರಹಿಸಿದೆ ಅದನ್ನು ಪ್ರಮುಖವಾಗಿ ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲಿ ಬಳಸುವ ವಿಚಾರವಿತ್ತು. ಇದಕ್ಕೆ ಅಮೆರಿಕಾ 25 ಮಿಲಿಯನ್ ಡಾಲರ್‌ಗಳಷ್ಟು ಕೊಡಲು ಒಪ್ಪಿ ಕೊಂಡಿದ್ದು. ಈಗ ಅಧ್ಯಕ್ಷ ಬುಶ್ ಹಿಂತೆಗೆಯಲು ಪ್ರಯತ್ನಿಸುತ್ತಿದ್ದಾರೆ. ಈಗ ಅವರು ಇಂತಹ ಸಹಾಯ ವಿಶ್ವ ಬ್ಯಾಂಕ್ ಮೂರನೆಯ ಜಗತ್ತಿನ ದೇಶಗಳಿಗೆ ಕೊಡರಿ ಎಂದು ನುಣುಚಿ ಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ವಿಶ್ವ ಬ್ಯಾಂಕ್ ಇಂತಹ ಯೋಜನೆಯೊಂದು ಪರಿಶೀಲಿಸಿ ಈಗಾಗಲೇ ಕೈಬಿಟ್ಟಿದೆ. ಈ ಹಿನ್ನೆಲೆಯಲ್ಲಿ

ಬುಶ್ ರವರ ಈ ನಿರ್ಧಾರ ವಿಶ್ವ ಸಂಸ್ಥೆಯ ಯೋಜನೆಗೆ ಕೊಡಲಿಯೇಟು ಮನು ಕುಲದ ಭವಿಷ್ಯತ್ತಿಗೆ ಆಪತ್ತು.

ಅಲ್ಲಲ್ಲಿ ಏನೇನು

ಮೇ 25 ರಂದು ಮಡಿಕೇರಿಯಲ್ಲಿ ಮಂಡಲ ಪಂಚಾಯ್ತಿ ನೌಕರರ ಜಿಲ್ಲಾ ಸಮಾವೇಶ ಕಾಂ. ಎನ್ನೆ ಉಪಾಧ್ಯಾಯ ಉದ್ಘಾಟನೆ ಕಾಂ. ಉಗ್ರಪ್ಪ ಅಧ್ಯಕ್ಷತೆ.

ಮೇ 30 ರಂದುಏಟಿಐ ವಿದ್ಯಾರ್ಥಿಗಳ ರಾಜ್ಯ ಸಮಾವೇಶ - ಬೆಂಗಳೂರು ಗುರುನಾನಕ ಭವನದಲ್ಲಿ ಪ.ಬಂಗಾಳ ಕಾರ್ಮಿಕ ಮಂತ್ರಿ ಶಾಂತಿಘಟಕ್ ರಿಂದ ಉದ್ಘಾಟನೆ ಕಾಂ. ಸೂರಿ ಮುಂತಾದವರಿಂದ ಭಾಷಣ.

ಜೂನ್ 21-25 ರವರೆಗೆ ಹಂಪಿಯಲ್ಲಿ ಡಿ.ವೈಎಫ್ ಅಧ್ಯಯನ ಶಿಬಿರ ವಿಷಯಗಳು ಅಂತರಾಷ್ಟ್ರೀಯ, ರಾಷ್ಟ್ರೀಯ ರಾಜಕೀಯ ಪರಿಸ್ಥಿತಿ, ಭಾಷೆ, ಮೀಸಲಾತಿ, ಸಾಂಸ್ಕೃತಿಕ ಕ್ರೀಡೆ, ಕೋಮುವಾದ, ಜಾತಿವಾದ, ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿ, ಕರ್ನಾಟಕದ ರಾಜಕೀಯ ಪರಿಸ್ಥಿತಿ. ಯುವಜನ ಚಳುವಳಿ ಇತ್ಯಾದಿ. ಕಾಂ. ಹನ್ನನ್ ಮುಲ್ಲಾ ಎಂ.ಪಿ. ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಿಂದ ಉಪನ್ಯಾಸ.

ಬಯೋನೆಟ್ ಇರಿದ ಅಂಗಾಲು ಸವೆಸಿದೆ ಸಾವಿರ ಸಾವಿರ ಗಾವುದ ದಾರಿ

1946 ಪುನ ಪ್ರವಯಲಾರ್ ರೈತ ಹೋರಾಟ ತೀವ್ರವಾಗಿ ನಡೆಯುತ್ತಿದ್ದ ಕಾಲವದು. ರೈತ, ಕೃಷಿಕೂಲಿಕಾರರು ಅತ್ಯಂತ ಧೀಮಂತಿಕೆಯಿಂದ ಹೋರಾಟ ನಡೆಸಿದ್ದರು. ಆಗ ಬ್ರಿಟಿಷ್ ಸರ್ಕಾರ ರೈತ ಕೃಷಿ ಕೂಲಿಕಾರರ ಸಂಘಟನೆಗಳನ್ನು, ಕಮ್ಯುನಿಸ್ಟ್ ಪಾರ್ಟಿಯನ್ನು ನಿಷೇದಿಸಿದ್ದರು.

ಕಾಂ. ವಿ.ಎಸ್. ಅಚ್ಯುತಾನಂದನ್ (ಈಗಿನ ಕೇರಳ ರಾಜ್ಯ ಸಮಿತಿ ಕಾರ್ಯದರ್ಶಿ, ಪಿ.ಬಿ. ಸದಸ್ಯರು) ರವರು ಕೃಷಿ ಕೂಲಿಕಾರರ ಸಂಘಟನೆಯ ನಾಯಕರು. ಸಂಘಟನೆ ಮತ್ತು ಪಕ್ಷ ನಿಷೇದಿಸಲ್ಪಟ್ಟದ್ದರಿಂದಾಗಿ ಎಲ್ಲಾ ನಾಯಕರೂಗಳೂ ಭೂಗತರಾದರು. ಆಗ

ಇತಿಹಾಸದ ಪುಟಗಳಿಂದ

ಕಾಂ. ವಿ.ಎಸ್. ರವರು ಕೊಟ್ಟಾಯಂ ಜಿಲ್ಲೆಯ ಹಳ್ಳಿಯೊಂದರ ಸಣ್ಣ ಮನೆಯಲ್ಲಿ, ಭೂಗತರಾಗಿ ವಾಸಿಸುತ್ತಿದ್ದರು. ಇವರನ್ನು ಬಂಧಿಸಲು ಪೋಲೀಸರು ತೀವ್ರವಾಗಿ ಪ್ರಯತ್ನ ಆರಂಭಿಸಿದ್ದರು. ಹಲವಾರು ತಿಂಗಳುಗಳುಗಳಾದರೂ ಸಿಗದೇ ಪೋಲೀಸರು ವಿಹ್ವಲರಾಗಿದ್ದರು.

.. , ಆದರೆ ಹೇಗೋ ಪೋಲೀಸರಿಗೆ ಕಾಂ. ವಿ.ಎಸ್. ರವರು ಇರುವರೆಂಬ ಸ್ಥಳದ ಸುಳಿವು ಸಿಕ್ಕಿ ಹೋಯಿತು. ತಕ್ಷಣವೇ ಮಿಂಚಿನಂತೆ ಎರಗಿದ ಪೋಲೀಸರು ಆ ಪುಟ್ಟ ಮನೆಯ ಸುತ್ತಲೂ ಶಸ್ತ್ರ ಸಜ್ಜಿತರಾಗಿ ಮುತ್ತಿಗೆ ಹಾಕಿ ಶಂಕಿತ ಯುವಕನನ್ನು ಬಂಧಿಸಿ ಎಳೆದೊಯ್ದರು.

ಇಲ್ಲ ಕೊಟ್ಟಾಯಂ ಪೋಲೀಸ್ ಠಾಣೆಯಲ್ಲಿ ವಿಪರೀತ ಆತಿಥ್ಯ ಆರಂಭವಾಯ್ತು. ಅಲ್ಲಿದ್ದ ಎಲ್ಲಾ ಪೋಲೀಸರು ಎಡ ಬಿಡದೇ ಕ್ರೂರವಾಗಿ ಹೊಡೆದರು.

ಇಷ್ಟಾದ ಮೇಲೆ ನೀನೇ ವಿನೋ ಅಚ್ಯುತಾನಂದನ್ ಎಂದು ಸಬ್ ಇನ್ಸ್‌ಪೆಕ್ಟರ್ ಗತ್ತಿನಿಂದ ಒದರಿದ್ದ. ತನ್ನ ಹೆಸರು ಅದಲ್ಲ ಎಂದೂ, ವಿನಾಕಾರಣ ಶಿಕ್ಷೆ ಯಾಕೆಂದು ಈ ದೃಢಕಾಯದ ಕೆಂಪನೆಯ ಹುಡುಗ ಉತ್ತರಿಸಿದ. ಎಷ್ಟು ಒತ್ತಾಯಿಸಿದರೂ ಒಂದೇ ಉತ್ತರ! ಇನ್ನೂ ಇದು ಪ್ರಯೋಜನವಿಲ್ಲವೆಂದುಈತನನ್ನು ಗುರುತುಹಿಡಿಯಲು ಆರೆಪ್ಪಿಯಿಂದ ಪೋಲೀಸರನ್ನು ಕರೆಸಿದರು. ಈತನೇ ಆ ಅಚ್ಯುತಾನಂದನ್ ಎಂದು ತಿಳಿದ ಮೇಲಂತೂ ಎಲ್ಲರೂ ಸೇರಿ ಮತ್ತೇ ಚಚ್ಚಿದರು. ಹೊಡೆತ ತಾಳದೇ ಯುವಕ ಪ್ರಜ್ಞಾಹೀನನಾಗಿ ಲಾಕಪ್‌ನಲ್ಲೇ ಬಿದ್ದು ಬಿಟ್ಟ.

ಇಷ್ಟಾದರೂ ಪೋಲೀಸರ ಹೀನಾಯ ಕ್ರೌರ್ಯ ಕೊನೆಯಲಿಲ್ಲ. ಪ್ರಜ್ಞಾಹೀನನಾಗಿ ಅಂಗಾತ ಬಿದ್ದ ಕಾಂ. ವಿ.ಎಸ್. ರವರ ಅಂಗಾಲ ಕಂಡೊಂಡನೆಯೇ ಪೋಲೀಸನೊಬ್ಬ ಬಯೋನೆಟ್‌ನ ಬಂದೂಕವನ್ನು ಎತ್ತಿ ಕೊಂಡವನೇ ಶಕ್ತಿಯೆಲ್ಲಾ ಹಾಕಿ ಜೋರಾಗಿ ಅಂಗಾಲಿಗೆ ಇರಿದ. ರಕ್ತ ಚಿಲ್ಲನೆ ಚಿಮ್ಮಿ ಕೋಣೆಯಲ್ಲಾ ಹರಿಯಿತು. ಯುವ ಹೋರಾಟಗಾರ ಸಂಗಾತಿ ರಕ್ತ ಮಡುವಿನಲ್ಲಿ ಕೆಂಪಾಗಿ ಹೋಗಿದ್ದ.

....ಇದಾಗಿ ದಶಕಗಳೇ ಕಳೆದಿದೆ. ಕಾಂ. ವಿ.ಎಸ್. ರವರ ಅಂಗಾಲಿನಲ್ಲಿ ಆಳ ವಾದ ಕುಳಿ ಇನ್ನೂ ಹಾಗೇ ಉಳಿದು ಕೊಂಡಿದೆ. ಈಗಲೂ ನಡೆಯುವಾಗ ಕುಂಟುತ್ತಾರೆ. ಅವರ ಈ ದೀರ್ಘ ಪಯಣದಲ್ಲಿ ಅದೆಷ್ಟೋ ಹೆಜ್ಜೆಗಳನ್ನು ಇರಿಸಿ ನಡೆದಿದ್ದಾರೆ. ಗಾಯ ವಾಸಿಯಾದರೂ ಅದರ ಗುರುತು ಮಾಯವಾಗಿಲ್ಲ.

– ಇ.ಕೆ.ಎನ್. ರಾಜನ್

– ಎಸ್.ವೈ. ಗುರುಶಾಂತ್

ದಕ್ಷಿಣ ಕನ್ನಡದಲ್ಲಿ ಮೇ ದಿನ

ಕರ್ನಾಟಕದ ಕಮ್ಯುನಿಸ್ಟ್ ಚಳವಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಮಹತ್ವದ ಸ್ಥಾನವಿದೆ. ಇಲ್ಲಿನ ದುಡಿಯುವ ವರ್ಗದ ನಡುವೆ 1920-30 ರ ದಶಕದಿಂದಲೂ ಎಡ ಪಂಥೀಯರ ಕಾರ್ಯಚಟುವಟಿಕೆ ನಡೆಯುತ್ತಿತ್ತು. ಕೇರಳದ ಬಲಿಷ್ಠ ಚಳವಳಿಯೂ ಬಹಳಷ್ಟು ಪ್ರಭಾವ ಬೀರಿತ್ತು.

ಅಂದು ಮದರಾಸು ಪ್ರಾಂತ್ಯಕ್ಕೆ ಸೇರಿದ ಜಿಲ್ಲೆಯಲ್ಲಿ ಆರಂಭದಲ್ಲಿ ನೇಯ್ಗೆ, ಬೀಡಿ, ಪ್ರೆಸ್ ಕೆಲಸಗಾರರು, ಮೂರ್ತೆದಾರರು ಸಂಘಟನಾ ಪ್ರಕ್ರಿಯೆಗೆ ಒಳಗಾಗಿದ್ದರು. ಹಂಚಿನ ಕಾರ್ಖಾನೆಗಳಿದ್ದರೂ ಮೊದಮೊದಲು ಅದರ ಕಾರ್ಮಿಕರು ಸಂಘಟಿತರಾಗಿರಲಿಲ್ಲ. ಆದರೆ ಅನಂತರದ ಕಾಲಘಟ್ಟದಲ್ಲಿ ಹಂಚಿನಕಾರ್ಮಿಕರು ದಕ್ಷಿಣಕನ್ನಡ ಕಾರ್ಮಿಕ ಚಳುವಳಿಯಲ್ಲಿ ಪ್ರಧಾನ ಪಾತ್ರ ವಹಿಸಿದ್ದು ಬೇರೆ ವಿಚಾರ.

1937 ಮೇ 1 ಸ್ಮರಣೀಯ ದಿನ

ಕಾರ್ಮಿಕ ಚಳವಳಿಯಾಗಿ ದಿನನಿತ್ಯದ ಆರ್ಥಿಕ ಕೇಳಿಕೆಗಳಿಗಾಗಿ ಹೋರಾಡುತ್ತಿದ್ದ ಜಿಲ್ಲೆಯ ಕಾರ್ಮಿಕ ವರ್ಗ ಕೊನೆಗೂ ಸ್ವಲ್ಪ ವಿಳಂಬವಾಗಿಯಾದರೂ ಅಂತರರಾಷ್ಟ್ರೀಯತೆಯ ತೆಕ್ಕೆಗೆ ಬಿದ್ದಿತು. 1937 ರ ಮೇ 1 ರಂದು ಮೊತ್ತಮೊದಲಬಾರಿಗೆ ದುಡಿಯುವ ವರ್ಗದ ಅಂತರಾಷ್ಟ್ರೀಯ ಸೌಹಾರ್ದತಾ ದಿನವಾದ 'ಮೇದಿನ' ವನ್ನು ದಕ್ಷಿಣಕನ್ನಡದಲ್ಲಿ ಆಚರಿಸಲಾಯಿತು. ಅಂದು ಅಂತರಾಷ್ಟ್ರೀಯ ಘೋಷಣೆಗಳು ಜಿಲ್ಲಾ ಕೇಂದ್ರ ಮಂಗಳೂರಿನಲ್ಲಿ ಮೊಳಗಿದವು. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಘಟಕ) ಇದರ ಮುಂಚೂಣಿಯಲ್ಲಿತ್ತು.

ಆ ದಿನ ಮಾರ್ನಮಿ ಕಟ್ಟೆಯಲ್ಲಿನ ನೇಯ್ಗೆ ಕೆಲಸಗಾರರ ಸಂಘದ ಕಚೇರಿಯಿಂದ ಹೊರಟ ಸುಮಾರು ಒಂದು ಸಾವಿರ ನೇಯ್ಗೆ, ಬೀಡಿ ಮತ್ತು ಪ್ರೆಸ್‌ಕಾರ್ಮಿಕರು ಕಂಕನಾಡಿ ಮಾರ್ಗ ವಾಗಿ ಈಗ ನೆಹರೂ ಮೈದಾನವೆಂದು ಪ್ರಸಿದ್ಧವಾಗಿರುವ ಅಂದಿನ ಸೆಂಟ್ರಲ್ ಮೈದಾನಕ್ಕೆ ಬಂದು ಸೇರಿ ಪ್ರಥಮ ಮೇದಿನ ಸಭೆಯನ್ನು ನಡೆಸಿದರು.

...ಹೀಗೆ ದಕ್ಷಿಣ ಕನ್ನಡ ಜಿಲ್ಲೆಯ ದುಡಿಮೆಗಾರರ ಚಳವಳಿಯಲ್ಲಿ 1937 ಮೇ 1 ಕೆಂಪಕ್ಷರದ ಸ್ಮರಣೀಯ ದಿನವಾಗಿದೆ.

ಮೇದಿನಕ್ಕೆ ಮೂಲವಾದ ಚಿಕಾಗೋದ ಹೇಮಾರ್ಕೆಟ್ ಸ್ಕೇರ್ ಘಟನೆಯ 51 ವರ್ಷಗಳು, ಅದರ ಆಚರಣೆ ಅಂತರಾಷ್ಟ್ರೀಯವಾಗಿ ಆರಂಭವಾದ47 ವರ್ಷಗಳ ನಂತರ ದ.ಕ.ದ. ದುಡಿಮೆಗಾರರು ಅಂತರಾಷ್ಟ್ರೀಯತೆಯ ಪ್ರವಾಹದಲ್ಲಿ ಸೇರಿದರು.

ಜಿಲ್ಲೆಯ ಈ ಐಕ್ಯತ ಪ್ರಥಮ ಸಭೆಯಲ್ಲಿ ಐಟಕ್ ಮುಖಂಡರಾದ ಕೇಶವ ಕಾಮತ್, ಅಹಮದ್ ಬಾವಾ, ಸಿಂಪ್ಸನ್ ಸೋನ್ಸ್ ಅಲ್ಲದೆ ಕಾಂಗ್ರೆಸ್ ನಾಯಕರಾದ ಎಸ್.ಎನ್.ಹೊಳ್ಳ, ಎಫ್ ಹಸನಬ್ಬ ಒಡೆಯರ್ ಕೂಡ ಮಾತನಾಡಿದರು.

ಅಂದಿನಿಂದ 1940 ರವರೆಗೆ ಮಂಗಳೂರಿನಲ್ಲಿ ಮಾತ್ರವೇ ಮೇದಿನದ ಆಚರಣೆ ನಡೆಯಿತು. 40 ರ ನಂತರ ಬಂಟ್ವಾಳ ಮತ್ತು ಉಡುಪಿಯಲ್ಲಿ ಆರಂಭವಾಯಿತು. 1942 ರ ವೇಳೆಗೆ ಪ್ರಮುಖವಾಗಿ ಮೋಟಾರ್, ಹಂಚು ಮತ್ತಿತರ ಉದ್ಯಮಗಳ ಕಾರ್ಮಿಕರೂ ಸಂಘವನ್ನು ರಚಿಸಿಕೊಂಡು ಅವರೂ ಮೇ ದಿನ ಕಾರ್ಯಕ್ರಮಗಳಲ್ಲಿ ಭಾಗವಹಿಸತೊಡಗಿದರು.

1942 ರ ನಂತರ ಸರಿಸುಮಾರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮೇ ದಿನಾಚರಣೆ ಆರಂಭವಾಯಿತು. ಕುಂದಾಪುರ ಮಾತ್ರ ಇದಕ್ಕೆ ಅಪವಾದ. ಅಲ್ಲಿ ಸ್ವಾತಂತ್ರ್ಯ ದೊರೆತ ನಂತರದ ಅವಧಿಯಲ್ಲಿ ಮೇದಿನ ಸಂಭ್ರಮ ತೊಡಗಿತು. 1943 ರಲ್ಲಿ ಕಾರ್ಕಳ ಮೊದಲ ಮೇದಿನ ಕಂಡಿತು.

ಸ್ವಯಂ ಸೇವಕರು

1943 ರಲ್ಲಿ ಮೊದಲ ಸಲ ಮೇ ದಿನ ಮೆರವಣಿಗೆಯಲ್ಲಿ ಸ್ವಯಂ ಸೇವಕ ಮತ್ತು ಸ್ವಯಂಸೇವಕಿಯರ ಆಕರ್ಷಕ ಪಥ ಸಂಚಲನ ನಡೆಯಿತು. ಪುರುಷರಿಗೆ ಖಾಕಿ ಪ್ಯಾಂಟು, ಕೆಂಪಂಗಿ, ಕೆಂಪು ಸ್ಕಾರ್ಫ್, ಮಹಿಳೆಯರಿಗೆ ಬಿಳಿ ಸೀರೆ, ಕಂಪು ರವಿಕೆ ಕೆಂಪು ಸ್ಕಾರ್ಫ್.

ನಿಷೇಧವನ್ನು ಕಡೆಗಣಿಸಿ

ಜಿಲ್ಲೆಯಲ್ಲಿ ಮೇ ದಿನಾಚರಣೆ ಸರಕಾರದ ನಿರ್ಬಂಧದಿಂದಾಗಿ ಅಡ್ಡಿ ಆತಂಕ ಎದುರಿಸಿದರೂ ಕಾರ್ಮಿಕರ ಸ್ಫೂರ್ತಿ ದಿನದ ಮಹತ್ವವನ್ನು ಎತ್ತಿಹಿಡಿದ ಒಂದೆರಡು ಪ್ರಕರಣಗಳು ನಡೆದಿವೆ.

ಎರಡನೇ ಮಹಾಯುದ್ಧ 1945 ರಲ್ಲಿ ಮುಗಿದ ನಂತರದ ಅವಧಿಯಲ್ಲಿ, ಮಂಗಳೂರಿನಲ್ಲಿ ಸಾರ್ವಜನಿಕ ಸಭೆಗಳನ್ನು ನಿಷೇಧಿಸಲಾಗಿತ್ತು. 1946 ಮತ್ತು 49ರಲ್ಲಿ ಹೀಗೆ ಎರಡು ಬಾರಿ ಇಂಥ ಪರಿಸ್ಥಿತಿಉದ್ಭವಿಸಿತು.

ನಿಷೇಧದಿಂದಾಗಿ ಮಂಗಳೂರಿನಲ್ಲಿ ಸಭೆ ನಡೆಸುವುದು ಕಷ್ಟವಾಗಬಹುದು ಎಂದರಿತ ಇಲ್ಲಿನ ಕಾರ್ಮಿಕರು ಪಡೀಲ್‌ಗೆ ಬಂದು ಸೇರಿ ಅಲ್ಲಿಂದ ಕಾಲ್ನಡಿಗೆಯಲ್ಲೇ ಸುಮಾರು 15 ಕಿ.ಮೀ. ದೂರದ ಬಂಟ್ವಾಳಕ್ಕೆ ಸಾಗಿ ಅಲ್ಲಿ ಈ ಎರಡೂ ವರ್ಷ ಮೇ ದಿನ ಆಚರಿಸಿದ ಸ್ಫೂರ್ತಿ ತುಂಬಾ ರೋಚಕವಾದದ್ದು ಕಾರ್ಮಿಕ ವರ್ಗ ತನ್ನೆದುರು ಬರುವ ಸವಾಲುಗಳಿಗೆ ಸ್ಪಂದಿಸುವ ರೀತಿಗೆ ಒಂದು ಅಪೂರ್ವ ಉದಾಹರಣೆ ಇದಾಗಿದೆ.

1970 ರನಂತರ

1970 ರತನಕ ಎ.ಐ.ಟಿ.ಯು.ಸಿ. ನೇತೃತ್ವದಲ್ಲಿ ನಡೆಯುತ್ತಿದ್ದ ಮೇ ದಿನಾಚರಣೆ, ಆ ವರ್ಷ ಮೇ ಕೊನೆಯಲ್ಲಿ ಸಿ.ಐ.ಟಿ.ಯು. ಸ್ಥಾಪನೆಯಾದ ಲಾಗಾಯ್ತು ಎರಡೂ ಸಂಘಟನೆಗಳ ನೇತೃತ್ವದಲ್ಲಿ ನಡೆಯುತ್ತಿದೆ. ಕೆಲವು ಅಪರೂಪದ ಸಂದರ್ಭಗಳಲ್ಲಿ ಮಾತ್ರ ಸಂಯುಕ್ತವಾಗಿ ಆಚರಿಸಲಾಗುತ್ತಿದೆ. ಕುಂದಾಪುರದಲ್ಲಿ ಸಿ.ಐ.ಟಿ.ಯು ಮಾತ್ರವೇ ಇರುವುದರಿಂದ ಅದೊಂದೇ ಸ್ವತಂತ್ರವಾಗಿ ನಡೆಸುವ ಮೇದಿನ ಮೆರವಣಿಗೆಯಲ್ಲಿ ಹೆಚ್ಚುಕಡಿಮೆ ಜಿಲ್ಲಾ ಕೇಂದ್ರ ಮಂಗಳೂರಿಗಿಂತಲೂ ಅಧಿಕ, ಕಾರ್ಮಿಕರು ಪಾಲ್ಗೊಳ್ಳುತ್ತಿದ್ದಾರೆ.

ಏನಿದ್ದರೂ ಇತ್ತೀಚಿನ ವರ್ಷಗಳಲ್ಲಿ ಮೇ ದಿನವನ್ನು ಯಾಂತ್ರಿಕವಾಗಿಯೆನ್ನುವಂತೆ ಆಚರಿಸಲಾಗುತ್ತಿದ್ದು ಅದಕ್ಕೆ ಅದರ ಮಹತ್ವ ಹಾಗೂ ಗತವೈಭವವನ್ನು ಮರಳಿಸಬೇಕಾಗಿದೆ. ವರ್ಗ ಹೋರಾಟದ ಸ್ಫೂರ್ತಿಯ ಚಿಲುಮೆಯನ್ನಾಗಿಸಬೇಕಾಗಿದೆ.

-ವಿಶ್ವ ಕುಂದಾಪುರ

ಬೆಲೆ ಏರಿಕೆ ವಿರುದ್ಧ ಎಡ ಪಕ್ಷಗಳ ಪ್ರತಿಭಟನೆ

ದೇಶದ ನಾಲ್ಕು ಪ್ರಮುಖ ಎಡಪಕ್ಷಗಳಾದ ಸಿ.ಪಿ.ಐ. (ಎಂ), ಸಿ.ಪಿ.ಐ, ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು ದಿ: 16-5-90 ರಂದು ಬೆಲೆ ಏರಿಕೆಯ ವಿರುದ್ಧ ರಾಷ್ಟ್ರವ್ಯಾಪ್ತಿ ಪ್ರತಿಭಟನೆ ನೀಡಿದ ಕರೆಯ ಮೇರೆಗೆ ರಾಜ್ಯದ ಅನೇಕ ಪ್ರದೇಶಗಳಲ್ಲಿ ಚಳುವಳಿಗಳನ್ನು ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರು:

ಬೆಂಗಳೂರಿನಲ್ಲಿ ರಾಜಭವನ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಿ.ಪಿ.ಐ. (ಎಂ) ನೇತೃತ್ವದಲ್ಲಿ ಸಂಜೆ 4 ಘಂಟೆಗೆ ನಗರದ ಚಿಕ್ಕಲಾಲ್‌ಬಾಗ್‌ನಿಂದ ನೂರಾರು ಕಾರ್ಯಕರ್ತರು ಮೆರವಣಿಗೆಯ ಮೂಲಕ ತೆರಳಿ ಬೆಲೆ ಏರಿಕೆಯನ್ನು ನಿಯಂತ್ರಿಸುವಂತೆ ಒತ್ತಾಯಿಸಿ ಮಾನ್ಯ ರಾಜ್ಯಪಾಲರಿಗೆ ಮನವಿಯನ್ನು ಅರ್ಪಿಸಲಾಯಿತು. ಅಗತ್ಯವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟಲು ಸೂಕ್ತಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿಪತ್ರದಲ್ಲಿ ಒತ್ತಾಯಿಸಲಾಗಿದೆ.

ಇದೇ ಸಂದರ್ಭದಲ್ಲಿ ರಾಜ್ಯ ಸರಕಾರವು ಸಹ ಜನಸಾಮಾನ್ಯರ ಮೇಲೆ ಹೊರಿಸುವ ಹೊಸ ತೆರಿಗೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಹಾಗೂ ಬಸ್ ಪ್ರಯಾಣ ದರ ಏರಿಕೆಯನ್ನು ಪರಿಷ್ಕರಿಸಬೇಕೆಂದು ಒತ್ತಾಯಿಸಲಾಗಿದೆ. ಸಿ.ಪಿ.ಐ.(ಎಂ) ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಹಾಗೂ ಸಿ.ಪಿ.ಐ. ಜಿಲ್ಲಾ ಮಂಡಳಿ ಕಾರ್ಯದರ್ಶಿ ಹೆಚ್.. ಮಹದೇವನ್ ನೇತೃತ್ವದಲ್ಲಿ, ನಿಯೋಗವೊಂದು ರಾಜ್ಯಪಾಲರಿಗೆ ಮನವಿ ಅರ್ಪಿಸಿತು. ಇದೇ ಸಂಧರ್ಭದಲ್ಲಿ ಪೋಲೀಸರ ಅನಗತ್ಯ ಹಸ್ತಕ್ಷೇಪವನ್ನು ಪ್ರಸ್ತಾಪಿಸಿ, ಅದನ್ನು ಸರಿಪಡಿಸುವಂತೆ ರಾಜ್ಯಪಾಲರನ್ನು ವಿಶೇಷವಾಗಿ ವಿನಂತಿಸಲಾಗಿದೆ.

ವಿರಾಜಪೇಟೆ

ಸಿಪಿಐ(ಎಂ) ವಿರಾಜಪೇಟೆ ಶಾಖೆಯ ಕಾರ್ಯಕರ್ತರು ಹಾಗೂ ಸಿಐಟಿಯುನ ಕಾರ್ಮಿಕರು ಸರಕಾರದ ಜನ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗುತ್ತಾ ತಂಡ ತಂಡವಾಗಿ ಸರಕಾರಿ ಬಸ್‌ಗಳನ್ನು ತಡೆದು ಬಂಧನಕ್ಕೊಳಗಾದರು.

ಮಡಿಕೇರಿ ತಾಲ್ಲೂಕಿನ ಸಿದ್ದಾಪುರದಲ್ಲಿ ಸಿಪಿಐ(ಎಂ), ಸಿಐಟಿಯು ಕಾರ್ಯಕರ್ತರು ರಸ್ತಾರೋಕೋ ನಡೆಸಿ ಬಂಧನಕ್ಕೊಳಗಾದರು. ಬಂಧಿತರನ್ನು ನಂತರ ಬಿಡುಗಡೆ ಮಾಡಿದರು.

ತುಮಕೂರು

CPI(M), CPI, AITUC, CITU, SFI ನ ನೂರಾರು ಕಾರ್ಯಕರ್ತರು ಪುರಭವನದಿಂದ ಮೆರವಣಿಗೆ ಹೊರಟು, ವಿವಿಧ ರಸ್ತೆಯಲ್ಲಿ ಚಲಿಸಿ, ಜನ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗುತ್ತಾ ಜಿಲ್ಲಾಧಿಕಾರಿಗಳಿಗೆ ಮನವಿಯೊಂದನ್ನು ಅರ್ಪಿಸಲಾಯಿತು. ನಂತರ ಬಸ್‌ನಿಲ್ದಾಣದ ಬಳಿ ಬಸ್ ತಡೆ ಕಾರ್ಯಕ್ರಮದಲ್ಲಿ ಬಸ್‌ಗಳನ್ನು ತಡೆದ ನೂರಾರು ಕಾರ್ಯಕರ್ತರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ವಿಜಾಪುರ

CPI(M), CPI ಪಕ್ಷಗಳ ಕಾರ್ಯಕರ್ತರು ನಗರದಲ್ಲಿ ಮೆರವಣಿಗೆ ಹೊರಟು ಜಿಲ್ಲಾಧಿಕಾರಗಳಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಈ ಮೆರವಣಿಗೆಯ ನೇತೃತ್ವವನ್ನು ಸಿಪಿಐ ನ ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿ, ಮುನ್ನಾಬು ಕಲಾದಗಿ, ಸದಾನಂದ ಜೋಡಿ, ಹಾಗೂ ಸಿಪಿಐನ ಜಿಲ್ಲಾ ಕಾರ್ಯದರ್ಶಿ ಎಸ್.ಕೆ. ಚಂಚಲಕರ, ಸುರೇಶ್ ಅರಳಿ, ಪ್ರಕಾಶ ಹಿಟ್ನಳ್ಳಿ ಮುಂತಾದವರು ವಹಿಸಿದ್ದರು.

ಚಿಕ್ಕಮಗಳೂರು

ಸುಮಾರು 200 ಕಾರ್ಯಕರ್ತರು ಮೆರವಣಿಗೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ, ಹಾಗೂ ರಾಜ್ಯ ಸರ್ಕಾರದ ಜನ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗುತ್ತಾ ಪ್ರಮುಖ ಬೀದಿಗಳನ್ನು ಹಾಯ್ದು ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ಮೆರವಣಿಗೆಯ ನೇತೃತ್ವವನ್ನು ಮಲೆನಾಡು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಕಾ. ವಿ.ಸುಕುಮಾರ್, ಕಾ. ಎಂ.ಪಿ. ಸುಬ್ಬಯ್ಯ ಕಾಫಿ ಕ್ಯೂರಿಂಗ್ ಕಾರ್ಮಿಕರ ಸಂಘದ ಕಾರ್ಯದರ್ಶಿ ವಿ.ಕೆ. ವಿಶ್ವನಾಥ್ ವಹಿಸಿದ್ದರು. ಪ್ರದರ್ಶನಕಾರರನ್ನುದ್ದೇಶಿಸಿ ಜಿಲ್ಲಾಧಿಕಾರಿ ಕಛೇರಿಯ ಮುಂದೆ, ಕಾಂ. ವಿ. ಸುಕುಮಾರ್ ಮಾತನಾಡಿದರು.

ಹಾಸನ

ಪಕ್ಷದ ಕಾರ್ಯಕರ್ತರು, ಹಿತೈಷಿಗಳು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ನೀಡಲಾಯ್ತು. ಕಾಂ. ಕೆ.ಬಿ. ರಾಘವೇಂದ್ರ, ಕಾಂ.ಜೆ.ಪಿ. ಸತ್ಯನಾರಾಯಣ ಅವರುಗಳು ಮೆರವಣಿಗೆಯ ನೇತೃತ್ವ ವಹಿಸಿದ್ದರು.

→ ಪುಟ 6

ಇ.ಎಂ.ಎಸ್. ಪ್ರಶ್ನೋತ್ತರ



ಕಾರ್ಮಿಕ ವರ್ಗದ ಸರ್ವಾಧಿಕಾರ ಮತ್ತು ಏಕಾಧಿಪತ್ಯ

ಪ್ರಶ್ನೆ:-

'ಕಾರ್ಮಿಕವರ್ಗದ ಸರ್ವಾಧಿಕಾರ ಕಾಲಕ್ರಮೇಣ ಏಕಧಿಪತ್ಯಕ್ಕೆ ಜಾರುತ್ತದೆ' ಎಂಬುದಕ್ಕೆ ಪೂರ್ವ ಯುರೋಪಿನ ಘಟನೆಗಳು ಸಾಕ್ಷಿಗಳಾಗಿವೆ.... ಈ ವಾದದ ಕುರಿತ ತಮ್ಮ ಅಭಿಪ್ರಾಯವೇನು?

ದಿಲೀಪ್ ಕುಮಾರ್
ಪತ್ತನಂತಿಟ್ಟ

ಕಾರ್ಮಿಕವರ್ಗದ ಸರ್ವಾಧಿಕಾರವು, ಕಾರ್ಮಿಕ ವರ್ಗದ ಪಕ್ಷದ ಸರ್ವಾಧಿಕಾರವಾಗಿ ಕೊನೆಯಲ್ಲಿ ಪಕ್ಷದ ನಾಯಕತ್ವದಲ್ಲಿರುವ ಕೆಲವು ವ್ಯಕ್ತಿಗಳ ಸರ್ವಾಧಿಕಾರವಾಗಿಯೂ, ಬೆಳೆಯುವ ಸಾಧ್ಯತೆ ಇದೆ. ನೇತೃತ್ವವಹಿಸುವ ಯಾವುದಾದರೂ ಓರ್ವ ವ್ಯಕ್ತಿಯ ಸರ್ವಾಧಿಕಾರವಾಗಿಯೂ ಅದು ಮಾರ್ಪಾಡಾಗುವ ಸಾಧ್ಯತೆಯಿದೆ. ಸೋವಿಯತ್ ಒಕ್ಕೂಟದಲ್ಲಿ ಸ್ಟಾಲಿನ್ ಮತ್ತು ಚೀನಾದಲ್ಲಿ ಮಾವೋರವರ ನಾಯಕತ್ವದ ಕಾಲಘಟ್ಟದಲ್ಲಿ ಘಟಿಸಿದ್ದು ಇದೇ.

ಆದರೆ, ಪೂರ್ವಯುರೋಪಿನ ವಿದ್ಯಮಾನಗಳು ಕಾರ್ಮಿಕವರ್ಗದ ಸರ್ವಾಧಿಕಾರವು ಕಾಲಕ್ರಮೇಣ ಒಬ್ಬ ವ್ಯಕ್ತಿಯ ಏಕಾಧಿಪತ್ಯವಾಗಿ ಬೆಳೆಯುತ್ತದೆ ಎನ್ನುವ ಅಂಶವನ್ನು ಪುಷ್ಟೀಕರಿಸುವುದಿಲ್ಲ. ಬದಲಾಗಿ ಏಕಾಧಿಪತ್ಯ ಬೆಳೆಯಲು ಬಿಡುವುದಿಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ. ಸೋವಿಯತ್ ಒಕ್ಕೂಟ ಚೀನಾಗಳನ್ನೊಳಗೊಂಡ ಎಲ್ಲಾ ಸಮಾಜವಾದಿ ದೇಶಗಳಲ್ಲಿ ಜಾರಿಗೊಳಿಸುತ್ತಿರುವ ಪ್ರಜಾಪ್ರಭುತ್ವವಾದಿ ಸುಧಾರಣೆಗಳು ಯಾವುದೇ ಬೂರ್ಜ್ವಾ ಪ್ರಭುತ್ವವಾದಿಗಳನ್ನು ಸಂತೋಷಪಡಿಸುವಂತಹದ್ದಾಗಿದೆ.

'ಮಾಲೀಕ ವರ್ಗದ ಸೋಲಿನೊಂದಿಗೆ ರೂಪಗೊಳ್ಳುವ ಸಮಾಜವಾದಿ ಅಳ್ವಿಕೆಗೆ ವಿರೋಧಿಗಳ ವಿರೋಧಗಳನ್ನು ತಡೆಗಟ್ಟಲು ಬಲ ಪ್ರಯೋಗವನ್ನೂ ಬಳಸಬೇಕಾಗುತ್ತದೆ ಎಂದು ಕಾರ್ಮಿಕ ವರ್ಗದ ಸರ್ವಾಧಿಕಾರವೆಂಬ ತತ್ವವನ್ನು ರೂಪಿಸಿದ ಮಾರ್ಕ್ಸ್ ಮತ್ತು ಏಂಗಲ್ಸರು ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಪ್ರತಿಪಾದಿಸಿದ್ದಾರೆ. ಪ್ರಣಾಳಿಕೆಯ ವಿವರಣೆ ಹೀಗಿದೆ - "ಇಷ್ಟರ ತನಕ ಅಲ್ಪಸಂಖ್ಯಾತರಾದ ಶೋಷಕರು ಬಹುಸಂಖ್ಯಾತರಾದ ಶೋಷಿತರ ಮೇಲೆ ಬಲ ಪ್ರಯೋಗ ನಡೆಸುತ್ತಿದ್ದರು: ಸಮಾಜವಾದಿ ಸಮಾಜ ಉದಯದಿಂದ ಬಹು ಸಂಖ್ಯಾತರು, ಅಲ್ಪ ಸಂಖ್ಯಾತರ ಮೇಲೆ ಬಲ ಪ್ರಯೋಗ, ನಡೆಸುವ ಒಂದು ವ್ಯವಸ್ಥೆ ಮೊತ್ತ ಮೊದಲಿಗೆ ರೂಪುಗೊಳ್ಳುತ್ತದೆ". ಹೀಗೆಂದರೆ ಹಿಂದೆ ಶೋಷಿತರಾಗಿದ್ದ ಬಹು ಸಂಖ್ಯಾತ ವಿಭಾಗಕ್ಕೆ ಪೂರ್ಣವಾದ ಪ್ರಜಾಪ್ರಭುತ್ವ ಹಕ್ಕುಗಳು, ಮೊದಲು ಶೋಷಕರಾಗಿದ್ದ ಅತ್ಯಲ್ಪ ಸಂಖ್ಯೆಯ ವಿಭಾಗಕ್ಕೆ ಪ್ರಜಾಪ್ರಭುತ್ವ ಹಕ್ಕುಗಳ ನಿಷೇಧ ಮತ್ತು ಅವರ ಮೇಲೆ ದಮನ ಕಾರಿ ಯಂತ್ರದ ಪ್ರಯೋಗ ಇದು ಕಾರ್ಮಿಕ ವರ್ಗದ ಸರ್ವಾಧಿಕಾರ ತತ್ವದ ಸಂಕ್ಷಿಪ್ತಾರ್ಥ.

ಅಕ್ಟೋಬರ್ ಮಹಾಕ್ರಾಂತಿಯ ಬಳಿಕ ರೂಪುಗೊಂಡ ಸೋವಿಯತ್ ರಾಜ್ಯಾಡಳಿತವನ್ನು ಲೆನಿನ್ ರೂಪಿಸಿದ್ದು ಈ ನೆಲೆಯಲ್ಲಿಯೇ ಆಗಿತ್ತು. ಸೋವಿಯತ್ ನಾಡಿನಲ್ಲಿ ಜನತೆಗೂ, ಸೋವಿಯತ್ ಕಮ್ಯುನಿಸ್ಟ್ ಪಕ್ಷದೊಳಗೆ ಅದರ ಸದಸ್ಯರಿಗೂ, ಸಂಪೂರ್ಣ ಪ್ರಜಾಪ್ರಭುತ್ವ ಹಕ್ಕುಗಳನ್ನು ನೀಡುತ್ತಾ ಶೋಷಕ ವರ್ಗದ ಅವಶೇಷಗಳ ಮೇಲೆ ಲೆನಿನ್ ಬಲಪ್ರಯೋಗ ನಡೆಸಿದ್ದರು.

ಜಾಗತಿಕ ಪರಿಸ್ಥಿತಿಯಲ್ಲಿ ಈ ಬಲ ಪ್ರಯೋಗ ಅನಿವಾರ್ಯವಾಗಿತ್ತು. ಅದೇ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷದೊಳಗೂ, ಜನತೆಯಲ್ಲೂ ಸಂಪೂರ್ಣವಾದ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಂರಕ್ಷಿಸಿಕೊಂಡರೆ ಮಾತ್ರ ಕಾರ್ಮಿಕ ವರ್ಗದ ಸರ್ವಾಧಿಕಾರದ ಕರ್ತವ್ಯ ನೆರವೇರಿಸಲು ಸಾಧ್ಯ.

ಮುಂದೆ, ಸೋವಿಯತ್ ಒಕ್ಕೂಟದಲ್ಲಿ ಸ್ಟಾಲಿನ್ ಮತ್ತು ಚೀನಾದಲ್ಲಿ ಮಾವೋ ಮೊದಲಾದವರಿಂದ ಆರಂಭವಾಗಿ ನಂತರದ ಕಮ್ಯುನಿಸ್ಟ್ ನಾಯಕರು ಈ ಲೆನಿನಿಸ್ಟ್ ದಾರಿಯನ್ನು ತಪ್ಪಿದರು. ಇಂದು ವಿಶ್ವ ಕಮ್ಯುನಿಸ್ಟ್ ನಾಯಕರ ತೀಕ್ಷ್ಣ ಟೀಕೆಗೆ ಗುರಿಯಾಗಿರುವುದು ಆ ತಪ್ಪುಗಳೇ ಆಗಿವೆ. 'ಕಾರ್ಮಿಕ ವರ್ಗ ಕ್ರಮೇಣ ಸರ್ವಾಧಿಕಾರದಿಂದ ವ್ಯಕ್ತಿಯ ಏಕಾಧಿಪತ್ಯಕ್ಕೆ ಜಾರುತ್ತದೆ ಎನ್ನುವುದನ್ನು ನಿರಾಕರಿಸುವ ಶಕ್ತಿಗಳೂ ಕಮ್ಯುನಿಸ್ಟ್ ಚಳುವಳಿಯ ಒಳಗಡೆಯೇ ಬೆಳೆಯುತ್ತದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆಯಲ್ಲವೇ?

ಇಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸಬೇಕಾಗಿದೆ. ಸೋವಿಯತ್ ಒಕ್ಕೂಟದಲ್ಲಿ ಸ್ಟಾಲಿನ್ ಮತ್ತು ಚೀನಾದಲ್ಲಿ ಮಾವೋ ಅನುಸರಿಸಿದ ಏಕಾಧಿಪತ್ಯಕ್ರಮಗಳಿಗೆ ಅವತ್ತಿನ ಜಾಗತಿಕ ಪರಿಸ್ಥಿತಿ ಸಂಪೂರ್ಣ ಸಹಾಯಕವಾಗಿತ್ತು. ಸೋವಿಯತ್ ಒಕ್ಕೂಟವನ್ನು, ಚೀನಾವನ್ನು ಒಳಗೊಂಡ ಎಲ್ಲಾ ಸಮಾಜವಾದಿ ದೇಶಗಳನ್ನು ಮಾರಕ ಆಯುಧಗಳನ್ನು ಉಪಯೋಗಿಸಿ, ಯುದ್ಧದಿಂದ ನಾಶಪಡಿಸಲು ಸಾಮ್ರಾಜ್ಯಶಾಹಿ ಪ್ರಯತ್ನಿಸುತ್ತಿತ್ತು. ಅದಕ್ಕಾಗಿ ಸಮಾಜವಾದಿ ದೇಶಗಳಲ್ಲಿದ್ದ ಭಿನ್ನಮತೀಯ ವಿಭಾಗಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಅವರು ಸಂಕೋಚ ಪಡಲಿಲ್ಲ.

ಆ ಸನ್ನಿವೇಶದಲ್ಲಿ ಹೊರಗಿನಿಂದಲೂ, ಒಳಗಿನಿಂದಲೂ ಬರುವ ಆಪತ್ತುಗಳನ್ನು ತಡೆಯಲು ಕ್ರಾಂತಿಕಾರಕವಾದ ಬಲ ಪ್ರಯೋಗವನ್ನು ಮಾಡದಿರಲು ಸಾಧ್ಯವಿರಲಿಲ್ಲ. ಆದುದರಿಂದ ಅಂದು ಪ್ರಕಟಗೊಂಡ ಏಕಾಧಿಪತ್ಯದ ಕುರಿತ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಬಹುದಾದ ಯಾರಿಗಾದರೂ ಅರ್ಥವಾಗುತ್ತದೆ.

ಆದರೂ ಕೂಡ ಸ್ಟಾಲಿನ್ನರ ಮತ್ತು ಮಾವೋರ ಏಕಾಧಿಪತ್ಯ ಮಾರ್ಕ್ಸ್‌ವಾದ ಲೆನಿನ್‌ವಾದಕ್ಕೆ-ಕಾರ್ಮಿಕ ವರ್ಗ ಸರ್ವಾಧಿಕಾರಕ್ಕೆ - ವಿರುದ್ಧವಾಗಿತ್ತು. ಪಕ್ಷವನ್ನೂ ಒಟ್ಟು ಜನತೆಯನ್ನು ಸಂಪೂರ್ಣ ಸಂಘಟಿಸಿ ಅದಕ್ಕೆ ಬೇಕಾಗುವಷ್ಟು ಪ್ರಜಾತಾಂತ್ರಿಕ ಮಾರ್ಗಗಳನ್ನಂಗೀಕರಿಸುತ್ತಾ ಒಳಗಿನಿಂದಲೂ ಹೊರಗಿನಿಂದಲೂ ಬರುವ ಆಪತ್ತುಗಳನ್ನು ನೀಗಿಸಬೇಕಾಗಿತ್ತು.

ಇಲ್ಲಿಯೇ ಸ್ಟಾಲಿನ್ ಮಾವೋರವರನ್ನೂ ಒಳಗೊಂಡ ಹಲವು ವಿಶ್ವಕಮ್ಯುನಿಸ್ಟ್ ನಾಯಕರು ತಪ್ಪು ಮಾಡಿದ್ದು.

ಇಂದಿನ ಜಾಗತಿಕ ರಾಜಕೀಯ ಪರಿಸ್ಥಿತಿ ಸ್ಟಾಲಿನ್ ಮತ್ತು ಮಾವೋರ ಕಾಲದಲ್ಲಿದ್ದ ಪರಿಸ್ಥಿತಿಗಿಂತ ಭಿನ್ನವಾಗಿದೆ. ಅಂದು ಬಳಸಲಾದ ಬಲಪ್ರಯೋಗವನ್ನು ಇಂದೂ ಮುಂದುವರಸಿದರೆ ಸಮಾಜವಾದದ ಪ್ರಗತಿ ತಡೆಯಲ್ಪಡುತ್ತದೆ. ಆಕ್ರಮಣ ಯುದ್ಧಗಳ ಮತ್ತು ಪ್ರಜಾಪ್ರಭುತ್ವದ ಧ್ವಂಸದ ಸಮೂರ್ತರೂಪವಾದ ಸಾಮ್ರಾಜ್ಯಶಾಹಿಯ ವಿರುದ್ಧ ಜಗತ್ತಿನಾದ್ಯಂತ ಇರುವ ಪ್ರಜಾಪ್ರಭುತ್ವವಾದಿಗಳು ನಡೆಸುತ್ತಿರುವ ಹೋರಾಟಗಳಿಂದ ಸಮಾಜವಾದವು ದೂರತಳ್ಳಲ್ಪಡಲು ಮಾತ್ರ ಸಹಾಯಕ. ಆದುದರಿಂದಲೇ ಇಂದು ಸೋವಿಯತ್ ಒಕ್ಕೂಟ, ಚೀನಾವನ್ನೊಳಗೊಂಡ ಎಲ್ಲಾ ವಿಶ್ವ ಸಮಾಜವಾದಿ ದೇಶಗಳೂ ಅವುಗಳ ಪಕ್ಷಗಳೂ ಪ್ರಜಾಪ್ರಭುತ್ವವಾದಿ ಸುಧಾರಣೆಗಳನ್ನು ಮುಖ್ಯ ಕಾರ್ಯಕ್ರಮವಾಗಿ ಅಂಗೀಕರಿಸಿರುವವು.

ಗಮನಿಸಿ! ಗಮನಿಸಿ!!

ನಿಮ್ಮ ಪತ್ರಿಕೆ "ಐಕ್ಯರಂಗ"ದಲ್ಲಿ ಹೊಸ ಶಿರ್ಷಿಕೆಗಳು ಓದುಗರಿಗೆ ವಿಪುಲ ಅವಕಾಶ ನೀಡುವ ಪುಟಗಳು. ಎಲ್ಲಾ ಸಂಗಾತಿಗಳೂ ಉತ್ಸಾಹದಿಂದ ಪಾಲ್ಗೊಳ್ಳುವ ಅವಕಾಶ.

"ಕಮ್ಯುನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ"

ದೇಶವನ್ನು ಕ್ರಾಂತಿಯತ್ತ ನಡೆಸುವ ಮಹತ್ವದ ಕೆಲಸಕ್ಕಾಗಿ ನಮ್ಮ ಸಂಗಾತಿಗಳು ಕಮ್ಯುನಿಸ್ಟ್ ಚಳುವಳಿಯತ್ತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ಸೆಳೆಯಲ್ಪಟ್ಟಿದ್ದಾರೆ. ಒಬ್ಬೊಬ್ಬ ಸಂಗಾತಿಗಳದು ಒಂದೊಂದು ವಿಶಿಷ್ಟ ಅನುಭವ. ನೀವು ಕಮ್ಯುನಿಸ್ಟ್ ಚಳುವಳಿಯತ್ತ ಹಾಕಿದ ಹೆಜ್ಜೆಯನ್ನು 2/3 ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

ಉತ್ತಮವಾದುದನ್ನು ಆರಿಸಿ ಪ್ರಕಟಿಸಲಾಗುತ್ತದೆ.

ಕೊಡುಗೆ: ಬರೆಯಲು ಸಾಧ್ಯವಿಲ್ಲದ ಹಿರಿಯ-ಕಿರಿಯ ಸಂಗಾತಿಗಳ ರೋಚಕ ಅನುಭವವನ್ನು ಬರೆಯಬಲ್ಲ ಸಂಗಾತಿಗಳು ಬರೆದು ಕಳುಹಿಸಬಹುದು. ಈ ವಿಶೇಷ ಪ್ರಯತ್ನಕ್ಕಾಗಿ ಬರೆದು ಕಳುಹಿಸಿದ ಸಂಗಾತಿಗಳಿಗೆ 3 ತಿಂಗಳ/6 ತಿಂಗಳ ಐಕ್ಯರಂಗ ಉಚಿತ.

"ನನ್ನ ಮನ ಮುಟ್ಟಿದ ಘಟನೆ"

ನಮ್ಮ ಕಣ್ಣ ಮುಂದೆಯೇ ಅನೇಕ ಘಟನೆಗಳು ಕ್ರಾಂತಿಕಾರಿಗಳಾದ ನಮ್ಮ ಮನಸ್ಸನ್ನು ಕಲಕುವ, ಮನ ಮುಟ್ಟುವ, ನಮ್ಮ ಚಳುವಳಿಯಲ್ಲಿ ನೆಚ್ಚುಗೆ ಮೂಡಿಸುವ ಘಟನೆಗಳು- ಕಾರ್ಮಿಕರ ರೈತರ ಸಾಮಾನ್ಯ ಜನರ ವೀರಾವೇಶದ ಕೃತ್ಯಗಳು - ಹೋರಾಟಗಳಲ್ಲಿ, ಹೋರಾಟಗಳ ಸೋಲಿನಲ್ಲಿ, ದಿನನಿತ್ಯದ ಬದುಕಿನಲ್ಲಿ ನಡೆಯುತ್ತಿರುತ್ತವೆ. ನಿಮ್ಮ ಮನಸ್ಸಿಗೆ ತಾಕಿದ ಘಟನೆ 'ಐಕ್ಯರಂಗ' ಓದುಗರೆಲ್ಲರ ಮನಸ್ಸಿಗೆ ಮುಟ್ಟಲು ಒಂದರಿಂದ ಎರಡು ಪುಟಗಳಲ್ಲಿ, ಆಕರ್ಷಕವಾಗಿ ಬರೆದು ಕಳುಹಿಸಿ.

'ಐಕ್ಯರಂಗ' ಪ್ರಶ್ನೋತ್ತರ ವಿಭಾಗ

ನಮ್ಮ ಸಂಗಾತಿಗಳಿಗೆ ಹಲವಾರು ಪ್ರಶ್ನೆಗಳು ಎದುರಾಗುತ್ತಿರುತ್ತವೆ.

ಈ ಪ್ರಶ್ನೆಗಳಲ್ಲಿ ಹಲವು ವಿಧ. ವಿಶ್ವದಲ್ಲಿ ಎಷ್ಟು ಕಮ್ಯುನಿಸ್ಟ್ ದೇಶಗಳಿವೆ? ಅವು ಯಾವುವು? ವಿಯತ್ನಾಂನಲ್ಲಿ ಕ್ರಾಂತಿ ಯಾವಾಗ ನಡೆಯಿತು? ಎಂಬ ಮಾಹಿತಿಯನ್ನು ಬಯಸುವ ಪ್ರಶ್ನೆಗಳು. ಚಿಕ್ಕ ಉತ್ತರಗಳನ್ನು ಬಯಸುವ ಚಿಕ್ಕ ಪ್ರಶ್ನೆಗಳು. ಈ ಪ್ರಶ್ನೆಗಳನ್ನು "ಐಕ್ಯರಂಗ ಪ್ರಶ್ನೋತ್ತರ ವಿಭಾಗಕ್ಕೆ ಕಳುಹಿಸಿ ಅಂಚೆ ಕಾರ್ಡಿನಲ್ಲಿ "ಐಕ್ಯರಂಗ" ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಕಾಂ. ಇ.ಎಂ.ಎಸ್. ಪ್ರಶ್ನೋತ್ತರ

ರಾಷ್ಟ್ರೀಯ, ಅಂತರರಾಷ್ಟ್ರೀಯ ಸೈದ್ಧಾಂತಿಕ, ರಾಜಕೀಯ ಪ್ರಶ್ನೆಗಳಿಗೆ ಕಾಂ. ಇ.ಎಂ.ಎಸ್. ಉತ್ತರಿಸಲೊಪ್ಪಿದ್ದಾರೆಂದು ಈಗಾಗಲೇ ಪ್ರಕಟಿಸಿದ್ದೇವೆ. ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಂದಲೇ ಉತ್ತರಗಳನ್ನು ಪಡೆಯಬಹುದಾದ ಈ ಸುವರ್ಣಾವಕಾಶವನ್ನು ಸಂಗಾತಿಗಳು ಸದುಪಯೋಗಪಡಿಸಿಕೊಳ್ಳಬೇಕು. ಕಾಂ. "ಇ.ಎಂ.ಎಸ್. ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಗಮನಿಸಿ ಈ ಎಲ್ಲಾ ಕಾಲಂಗಳು ಜುಲೈ ಒಂದರಿಂದ ಪ್ರಾರಂಭ ಸಂಗಾತಿಗಳೇ ತ್ವರೆ ಮಾಡಿ.

ರಾಷ್ಟ್ರೀಯ ರಂ

ಜನತೆ ರಾಷ್ಟ್ರೀಯ ರಂಗಸರ್ಕಾರವನ್ನು ಆಡಳಿತಕ್ಕೆ ತಂದು ಅರ್ಧ ವರ್ಷವೇ ಸಂದಿದೆ. ದೇಶ ಒಂದು ಕ್ಲಿಷ್ಟ ಪರಿಸ್ಥಿತಿಯನ್ನೆದುರಿಸುತ್ತಿದೆ. ಸ್ಪಷ್ಟ ಬಹುಮತವಿಲ್ಲದೆ ಅಧಿಕಾರಕ್ಕೆ ಬಂದ ಸರ್ಕಾರ ತನ್ನ ಬಗ್ಗೆ ಜನರಲ್ಲಿ ವಿಶ್ವಾಸವನ್ನು ಭರವಸೆಯನ್ನು ಮೂಡಿಸಬೇಕಾಗಿದೆ. ಕಾಂಗ್ರೆ ಪಕ್ಷಕ್ಕೆ ಬದಲಾಗಿ ನಮಗೆ ಮತಕೊಡಿ ಎಂದು ಜನತೆಯನ್ನು ವಿನಂತಿಸಿದ ಸಂದರ್ಭದಲ್ಲಿ ಜನತೆಯ ಮುಂದಿಟ್ಟ ಪ್ರಣಾಳಿಕೆಯನ್ನು ಯಾವುದನ್ನು ನೆಚ್ಚಿ ಜನ ಮತವಿತ್ತರೋ ಕಾಂಗ್ರೆಯನ್ನು ಹೊರದೂಡಿದರೋ ಆ ಪ್ರಣಾಳಿಕೆಯನ್ನು ರಾಷ್ಟ್ರೀಯರಂಗ ಅನುಷ್ಠಾನಕ್ಕೆ ತಂದರೆ ಸಾಕು . ಜನತೆಗೆ ಪರಿಹಾರ ದೊರಕಿಸುವುದು ಸಾಧ್ಯ. ಈ ನಿಟ್ಟಿನಲ್ಲಿ ರಾಷ್ಟ್ರೀಯ ರಂಗ ಸರ್ಕಾರ ಇನ್ನೂ ಸಾಗಬೇಕಾಗಿರುವ ದೂರ ಎಷ್ಟಿದೆ ಎಂದು ಮುಂಬಯಿಯಲ್ಲಿ ನಡೆದ ವಿಚಾರ ಸಂಕಿರಣವೊಂದರಲ್ಲಿ ಕಣ್ಣುಹಾಯಿಸಿದ್ದಾರೆ ಸಿ.ಪಿ.ಐ. (ಎಂ) ಪಾಲಿಟ್‌ಬ್ಯುರೋ ಸದಸ್ಯ ಕಾಂ ಸುರ್ಜಿತ್.

ಅತ್ಯಂತ ಕ್ಲಿಷ್ಟ ರಾಜಕೀಯ ಸನ್ನಿವೇಶವನ್ನು ಎದುರಿಸುತ್ತಿದ್ದೇವೆ. ಜನತೆ ಕಾಂಗ್ರೆಸ್ (ಐ) ಯನ್ನು ನಿರ್ಣಾಯಕವಾಗಿ ನಿರಾಕರಿಸಿದ್ದಾರೆ. ಮೊದಲು ಲೋಕಸಭಾ ಚುನಾವಣೆಗಳಲ್ಲಿ, ನಂತರ ವಿಧಾನಸಭಾ ಚುನಾವಣೆಗಳಲ್ಲಿ ಮತ್ತೊಮ್ಮೆ ಮಹಾರಾಷ್ಟ್ರ ಮಾತ್ರ ಒಂದು ಅಪವಾದ. ಅಲ್ಲಿ ಪ್ರಮುಖ ಸವಾಲು ಇದ್ದುದ್ದು ಬಿ.ಜೆ.ಪಿ. ಶಿವಸೇನೆ ಕೂಟದಿಂದ. ಕಾಂಗ್ರೆಸ್ (ಐ) ಸೋಲಿಗೆ ನಾಲ್ಕು ಪ್ರಮುಖ ಕಾರಣಗಳು- 1)ಕಾಂಗ್ರೆಸ್ ಆಳ್ವಿಕೆಯಲ್ಲಿ ಆತಂಕಕಾರಿ ರೀತಿಯಲ್ಲಿ ರಾಷ್ಟ್ರೀಯ ಐಕ್ಯತೆಗೆ ಹೆಚ್ಚಿದ ಬೆದರಿಕೆ 2) ಹದಗೆಡುತ್ತಿದ್ದ ಆರ್ಥಿಕ ಪರಿಸ್ಥಿತಿ 3) ಪ್ರಜಾಪ್ರಭುತ್ವದ ಮೇಲೆ ಸರ್ವಾಧಿಕಾರಿ ಹಲ್ಲೆ. 4 ಉನ್ನತ ಸ್ಥಾನಗಳಲ್ಲಿ ವಿಪರೀತ ಭ್ರಷ್ಟಾಚಾರ.

ಜನತೆ ಕಾಂಗ್ರೆಯೇತರ ಸರಕಾರ ಅಧಿಕಾರ ವಹಿಸಿಕೊಳ್ಳಬೇಕೆಂದು ಬಯಸಿದರು. ಆದರೆ ರಾಷ್ಟ್ರೀಯ ರಂಗಕ್ಕೆ ಸ್ಪಷ್ಟ ಬಹುಮತ ಕೊಡಲಿಲ್ಲ. ಆದ್ದರಿಂದ ಜನತೆಯ ತೀರ್ಪಿಗೆ ಗೌರವ ನೀಡಲು ರಾಷ್ಟ್ರೀಯ ರಂಗ ಒಂದೆಡೆ ಎಡಪಕ್ಷಗಳ, ಇನ್ನೊಂದೆಡೆ ಬಿ.ಜೆ.ಪಿ.ಯ ಬೆಂಬಲದಿಂದ ಸರಕಾರ ರಚಿಸುವುದು ಅಗತ್ಯವಾಗಿತ್ತು. ಈ ಸನ್ನಿವೇಶದಲ್ಲಿ ನಾವು ಜನತೆಯ ತೀರ್ಪನ್ನು ಸ್ವೀಕರಿಸಿ ರಾಷ್ಟ್ರೀಯ ರಂಗಕ್ಕೆ ಸರಕಾರ ರಚಿಸಲು ಬೆಂಬಲ ನೀಡಿದೆವು.

ರಾಷ್ಟ್ರೀಯ ರಂಗ ತನ್ನ ಚುನಾವಣಾ ಪ್ರಣಾಳಿಕೆಯನ್ನು ಅನುಷ್ಠಾನಕ್ಕೆ ತಂದರೆ ಜನರಿಗೆ ಪರಿಹಾರ ದೊರಕಿಸುವುದು ಸಾಧ್ಯ. ಹಣದುಬ್ಬರ ನಿರುದ್ಯೋಗಗಳನ್ನು ತಡೆಯಬಹುದು; ಬೆಳವಣಿಗೆಗೆ ಉತ್ತೇಜನ ನೀಡಬಹುದು; ಪ್ರತ್ಯೇಕತಾವಾದಿ, ವಿಚ್ಛಿದ್ರಕಾರಿ, ಕೋಮು ಶಕ್ತಿಗಳ ಸವಾಲನ್ನು ಎದುರಿಸಬಹುದು; ಪ್ರಜಾಪ್ರಭುತ್ವ ನೀತಿನಿಯಮಗಳನ್ನು ಮತ್ತೆ ಸ್ಥಾಪಿಸಬಹುದು; ಕೇಂದ್ರ - ರಾಜ್ಯ ಸಂಬಂಧಗಳನ್ನು ಪುನರ್‌ರಚಿಸಬಹುದು ಮತ್ತು ಉಚ್ಚ ಸ್ಥಾನದಲ್ಲಿ ಭ್ರಷ್ಟಾಚಾರವನ್ನು ತಡೆಯಬಹುದು.

> ಆದರೂ ಕಾಂಗ್ರೆಸ್ (ಐ) ಆಳ್ವಿಕೆಯಲ್ಲಿ ಬಂದ ದುರವಸ್ಥೆಯಿಂದ ನಾವು ಪಾರಾಗಿದ್ದೇವೆ ಎಂಬ ಬಗ್ಗೆ ಸೂಚನೆ ಇನ್ನೂ ಕಾಣ ಬರುತ್ತಿಲ್ಲ.

ರಾಷ್ಟ್ರೀಯ ರಂಗ ಸರ್ಕಾರ ಈ ಪ್ರಶ್ನೆಗಳನ್ನು ಎದುರಿಸಲು ಪ್ರಯತ್ನ ನಡೆಸುತ್ತಿದೆ ಎಂಬುದನ್ನು ಕಳೆದ ನಾಲ್ಕು ತಿಂಗಳ ಬೆಳವಣಿಗೆಗಳು ಸೂಚಿಸುತ್ತವೆ. ಆದರೂ ಕಾಂಗ್ರೆಸ್ (ಐ) ಆಳ್ವಿಕೆಯಲ್ಲಿ ಬಂದ ದುರವಸ್ಥೆಯಿಂದ ನಾವು ಪಾರಾಗಿದ್ದೇವೆ ಎಂಬ ಬಗ್ಗೆ ಸೂಚನೆ ಇನ್ನೂ ಕಾಣ ಬರುತ್ತಿಲ್ಲ.

ಪ್ರಜಾಪ್ರಭುತ್ವ ನೀತಿ-ವಿಧಾನಗಳ ಮರುಸ್ಥಾಪನೆಗೆ, ಪ್ರಜಾಪ್ರಭುತ್ವ ರಚನೆಯನ್ನು ಬಲಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಹೊಸ ಸರಕಾರ ಕೆಲವು ಕ್ರಮಗಳನ್ನು ಕೈಗೊಂಡಿದೆ. ಇದು ಸ್ವಾಗತಾರ್ಹ. 59 ನೇ ತಿದ್ದುಪಡಿ ರದ್ದಾಗಿದೆ. ಸರಕಾರೀ ಮಾಧ್ಯಮಕ್ಕೆ, ಸ್ವಾಯತ್ತತೆ ಕೊಡುವ ಮಸೂದೆ ಬರುತ್ತಿದೆ. ಚುನಾವಣಾ ಸುಧಾರಣೆ, ಅಂತರ-ರಾಜ್ಯ ಸಂಬಂಧಗಳ ಬಗ್ಗೆ ಪ್ರಸ್ತಾವಗಳು ಮಂಡನೆಯಾಗಲಿವೆ. ಮೊತ್ತಮೊದಲಬಾರಿಗೆ ವಿವಿಧ ಜನವಿಭಾಗಗಳ ಸಾಮೂಹಿಕ ಸಂಘಟನೆಗಳನ್ನು ಈ ವಿಭಾಗಗಳನ್ನು ತಟ್ಟುವ ಪ್ರಶ್ನೆಗಳ ಮೇಲೆ ಧೋರಣೆಗಳನ್ನು ರೂಪಿಸುವಲ್ಲಿ ಒಳಗೊಳ್ಳುವ ಪ್ರಯತ್ನವನ್ನು ಸರಕಾರ ಮಾಡಿದೆ. ಸಂಸತ್ತಿನೊಳಗೆ ಸಂಸದೀಯ ರೀತಿ-ನೀತಿಗಳ ಮರುಸ್ಥಾಪನೆಗೆ ಗಂಭೀರ ಪ್ರಯತ್ನ ನಡೆಸಿದೆ. ಇವೆಲ್ಲ ಹಿಂದಿನ ಆಳ್ವಿಕೆಯಲ್ಲಿ ತೀವ್ರ ಹಲ್ಲೆಗೊಳಗಾಗಿದ್ದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಮರುಸ್ಥಾಪನೆಯಉತ್ತಮ ಲಕ್ಷಣಗಳು.

ಆರ್ಥಿಕ ಸನ್ನಿವೇಶಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯ ರಂಗ ಸರಕಾರ ರೈತಾಪಿಯ 10 ಸಾವಿರ ರೂ ವರೆಗಿನ ಸಾಲಮನ್ನಾ ಮುಂತಾದ ಜನರಿಗೆ ಪರಿಹಾರ ಒದಗಿಸುವ ಕೆಲವು ಕ್ರಮಗಳನ್ನು ಕೈಗೊಂಡಿದೆ. ತಾನು ಸಾಮ್ರಾಜ್ಯಶಾಹಿ ಆರ್ಥಿಕ ಒತ್ತಡಗಳಿಗೆ ಬಲಿಯಾಗುವುದಿಲ್ಲ ಎಂದು ಘೋಷಿಸಿದೆ. ಆದರೂ ನಾವು ಬಿಕ್ಕಟ್ಟಿನಿಂದ ಪಾರಾಗಿದ್ದೇವೆ ಎಂದು ಭಾವಿಸುವುದು ತಪ್ಪಾಗುತ್ತದೆ. ರೈಲ್ವೆ ಮತ್ತು ಸಾರ್ವತ್ರಿಕ ಬಜೆಟ್ಟಿನ ಪ್ರಸ್ತಾವಗಳು ಹಣದುಬ್ಬರ ಹೆಚ್ಚಿಸಿವೆ. ತೆರಿಗೆ ವಿಧಾನ ಹಾಗೂ ಸಂಪನ್ಮೂಲ ಶೇಖರಣೆಯ ವಿಧಾನ ಸಂಪನ್ಮೂಲ ವಿಪುಲವಾಗಿ ದೊರೆಯುವ ಮೂಲಗಳಿಂದ ಅವನ್ನು ಸಂಗ್ರಹಿಸುವಲ್ಲಿ ವಿಫಲಗೊಂಡಿವೆ. ಹೆಚ್ಚಿನ ಹೊರೆ ಜನ ಸಾಮಾನ್ಯರ ಮೇಲೆ ಬಿದ್ದಿದೆ. ಆರ್ಥಿಕ ಸನ್ನಿವೇಶ ವಿಕೃತಗೊಂಡಿದೆ, ಗಂಭೀರವಾಗಿದೆ.

> ರಾಷ್ಟ್ರೀಯ ರಂಗ ತನ್ನ ಚುನಾವಣಾ ಪ್ರಣಾಳಿಕೆಯನ್ನು ಅನುಷ್ಠಾನಕ್ಕೆ ತಂದರೆ ಜನರಿಗೆ ಪರಿಹಾರ ದೊರಕಿಸುವುದು ಸಾಧ್ಯ.

ಆರ್ಥಿಕದಲ್ಲಿ ಯಾವುದೇ ತೀವ್ರ ಬದಲಾವಣೆ ತರಬೇಕಾದರೆ ಬಡತನ, ನಿರುದ್ಯೋಗ ಸಮಸ್ಯೆಗಳನ್ನು ಎದುರಿಸಬೇಕು. ಕೃಷಿ ಸಂಬಂಧಗಳಲ್ಲಿ ಮೂಲಭೂತ ಬದಲಾವಣೆ ತರಬೇಕು. ಇದುವರೆಗೆ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಲಾಗದ ಭೂಸುಧಾರಣೆಗಳನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕು ಅದರ ಕುಂದು ಕೊರತೆಗಳನ್ನು ನಿವಾರಿಸಬೇಕು. ಇದೇ ರೀತಿ ಉದ್ಯೋಗಾವಕಾಶ ಸೃಷ್ಟಿಸಿ, ಬಡತನ ಪರಿಹಾರ ಕ್ರಮಗಳನ್ನು ಕೈಗೊಂಡ ಗ್ರಾಮೀಣ ಬಡವರ ಸ್ಥಿತಿ ಸುಧಾರಿಸಲು ವಿಶೇಷ ಗಮನ ನೀಡಬೇಕು. ಈ ಬಗ್ಗೆ ಹಲವಾರು ಯೋಜನೆಗಳು ಇದುವರೆಗೆ ಕಾಗದದ ಮೇಲಷ್ಟೆ ಉಳಿದಿದೆ. ಅನುಷ್ಠಾನದ ಜವಾಬ್ದಾರಿ ಅಧಿಕಾರಿಶಾಹಿಗೆ ನೀಡಿದ್ದು, ಮತ್ತು ಇದರಲ್ಲಿ ಜನತೆಯ ಪಾತ್ರ ಇಲ್ಲದಿದ್ದುದು-ಇವು ಇದುವರೆಗೆ ಈ ಯೋಜನೆಗಳ ಅನುಷ್ಠಾನದಲ್ಲಿ ಕಂಡುಬಂದಿರುವ ಮುಖ್ಯ ಲಕ್ಷಣಗಳು. ಇದು ಬದಲಾಗಬೇಕು. ಅಲ್ಲದೆ ನೇರ ತೆರಿಗೆ ಮೂಲಕ ಗುತ್ತೇದಾರಿ ಮನೆತನಗಳ ಅಪಾರ ಲಾಭದ ಮೇಲೆ ಮಿತಿಹಾಕಬೇಕು. ಜೀವನಾವಶ್ಯಕ ಸಾಮಾಗ್ರಿಗಳ ಬೆಲೆಗಳ ಮೇಲೆ ಹತೋಟಿಯಿಡಬೇಕು. ವಿದೇಶಿ ಬಂಡವಾಳಕ್ಕೆ ಆರ್ಥಿಕವನ್ನು ತೆರೆಯಬೇಕೆನ್ನುವ ಹೊರಗಡೆಯ ಎಲ್ಲಾ ಒತ್ತಡಗಳನ್ನು ಮನಬಂದಂತೆ ಆಮದು ಉದಾರೀಕರಣದ ಒತ್ತಡವನ್ನು ಎದುರಿಸಬೇಕು. ದೇಶದ ಆರ್ಥಿಕ ಸಾರ್ವಭೌಮತ್ವವನ್ನು ಬಿಟ್ಟು ಕೊಡುವಂತೆ ಮಾಡುವ ವಿಶ್ವಬ್ಯಾಂಕ್ - ಐ.ಎಂ.ಎಫ್. ಸೂಚಿಸಿದ ಉದಾರೀಕರಣದ ದಾರಿಯನ್ನು ಬದಲಿಸಬೇಕು.

ಭಾರತೀಯ ಕಾರ್ಮಿಕ ಸಮ್ಮೇಳನದ ೨೯ ನೇ ಅಧಿವೇಶನ

ಐಕ್ಯ ನಿಲುವಿನ ಉತ್ತಮ ಫಲಿತಾಂಶ

ಏಪ್ರಿಲ್ ೨೧ ಹಾಗೂ ೨೨ ರಂದು ಭಾರತೀಯ ಕಾರ್ಮಿಕ ಸಮ್ಮೇಳನದ ೨೯ನೇ ಅಧಿವೇಶನ ನವದೆಹಲಿಯಲ್ಲಿ ನಡೆಯಿತು. ೫ ವರ್ಷಗಳ ನಂತರ ಈ ತ್ರಿಪಕ್ಷೀಯ ಅಧಿವೇಶನ ನಡೆದಿದೆ. ೧೯೮೫ರಲ್ಲಿ ಅದಕ್ಕೆ ಮೊದಲು ೧೪ ವರ್ಷಗಳ ಕಾಲ ಈ ಅಧಿವೇಶನ ನಡೆದೇ ಇರಲಿಲ್ಲ. ಇದು ಕಾಂಗ್ರೆಸ್ ಸರ್ಕಾರ ತ್ರಿಪಕ್ಷೀಯ ಮಾತುಕತೆಗೆ ತಿಲಾಂಜಲಿ ನೀಡಿದ್ದರ ದ್ಯೋತಕವಾಗಿತ್ತು ಹಿಂದಿನ ಅಧಿವೇಶನ ಕೈಗಾರಿಕೆಗಳು ರೋಗಗ್ರಸ್ತವಾಗುವುದರ ಬಗ್ಗೆ ನಿಗಾ ಇಡಲು ಒಂದು ಸಮಿತಿ ರಚಿಸಲು ನಿರ್ಧರಿಸಿತು. ರಾಜೀವ ಸರ್ಕಾರ ಈ ಬಗ್ಗೆ ಕೂಡಾ ಏನೂ ಮಾಡಿರಲಿಲ್ಲ.

ಈ ಹಿನ್ನೆಲೆಯಲ್ಲಿ ೨೯ನೇ ಅಧಿವೇಶನ ನಡೆದಿರುವುದೇ ಸ್ವಾಗತಾರ್ಹ ಅಂಶ. ಅಧಿವೇಶನದಲ್ಲಿ ಕಾರ್ಮಿಕ ಮಂತ್ರಿ ರಾಮ್‌ವಿಲಾಸ್ ಪಾಸ್ವಾನ್ ಹಾಗೂ ಪ್ರಧಾನಿ ವಿ.ಪಿ.ಸಿಂಗ್‌ರು ತ್ರಿಪಕ್ಷೀಯ ನಿರ್ಣಯಗಳನ್ನು ಹೊಸ ಸರ್ಕಾರ ಗೌರವಿಸುವುದಾಗಿ ಭರವಸೆ ನೀಡಿದರು.

೨೯ನೇ ಅಧಿವೇಶನ ಎರಡು ಪ್ರಮುಖ ನಿರ್ಣಯಗಳನ್ನು ಅಂಗೀಕರಿಸಿತು. ಆಡಳಿತದಲ್ಲಿ ಕಾರ್ಮಿಕ ಪಾತ್ರದ ಬಗ್ಗೆ ಜನವರಿಯಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದ ತೀರ್ಮಾನಗಳನ್ನು ಈ ಅಧಿವೇಶನ ಪುನರುಚ್ಚರಿಸಿತು. ಅಂದರೆ ಎಲ್ಲಾ ಮಟ್ಟಗಳಲ್ಲಿ ಗುಪ್ತ ಮತದಾನದಿಂದ ಆಡಳಿತದಲ್ಲಿ ಕಾರ್ಮಿಕರ ಪ್ರತಿನಿಧಿಗಳು ಆರಿಸುವ ಬಗ್ಗೆ ಅಧಿವೇಶನ ಒಪ್ಪಿಗೆ ನೀಡಿತು. ಎರಡನೆಯದಾಗಿ ೧೯೮೮ರಲ್ಲಿ ಸಂಸತ್ತಿನಲ್ಲಿ ಮಂಡಿಸಿದ ಕೈಗಾರಿಕಾ ವಿವಾದ ಮಸೂದೆಯನ್ನು ಹಿಂದೆಗೆದುಕೊಂಡು ಹೊಸ ಮಸೂದೆಯ ರೂಪ ರೇಷೆ ಸಿದ್ಧಗೊಳಿಸಲು ದ್ವಿಪಕ್ಷೀಯ ಸಮಿತಿ ರಚಿಸುವ ಬಗ್ಗೆ ನಿರ್ಣಯ. ಈ ಪ್ರಕಾರ ಈಗಾಗಲೇ ಕಾಂಗ್ರೆ ಸರ್ಕಾರದ ಕೈಗಾರಿಕಾ ವಿವಾದ ಮಸೂದೆಯನ್ನು ಹಿಂತೆದುಕೊಳ್ಳಲಾಗಿದೆ. ೧೯ ಸದಸ್ಯರುಳ್ಳ ದ್ವಿಪಕ್ಷೀಯ ಸಮಿತಿಯನ್ನು ರಚಿಸಲಾಗಿದೆ. ಇಂಟಕ್‌ನ ರಾಮಾನುಜಂ ಅಧ್ಯಕ್ಷರಾಗಿರುವ ಈ ಸಮಿತಿಯಲ್ಲಿ ಸಿ.ಐ.ಟಿ.ಯು. ಪರವಾಗಿ ಎಂ.ಕೆ. ಫಂಡೆ ಇರುತ್ತಾರೆ ಜುಲೈ ೧೯೯೦ರೊಳಗೆ ಈ ಸಮಿತಿ ತನ್ನ ಪ್ರಸ್ತಾವಗಳನ್ನು ಮಂಡಿಸಲಿದೆ. ಸರ್ಕಾರ ಆರಂಭದಲ್ಲಿ ರಾಜೀವ ಮಸೂದೆಯನ್ನು ಹಿಂತೆಗೆದುಕೊಳ್ಳಲು ಹಿಂದೆ-ಮುಂದೆ ನೋಡುತ್ತಿತ್ತು.

ಅಧಿವೇಶನ ಕೇಂದ್ರ ಕಾರ್ಮಿಕ ಸಂಘಟನೆಗಳ ಸದಸ್ಯತ್ವ ಪರೀಕ್ಷಣೆಯ ವಿಧಾನ, ಕಾನ್ಸರ ನಿರ್ಮಾಣ ಕೆಲಸಗಾರರು ಹಾಗೂ ಕೃಷಿ ಕೂಲಿಗಾರರ ಬಗ್ಗೆ ಪ್ರಸ್ತಾಪಿತ ಶಾಸನ, ಬಾಲ, ಮಹಿಳಾ ಹಾಗೂ ವಲಸೆ ಕಾರ್ಮಿಕರ ಕುರಿತಾದ ಕಾನೂನು, ಧೋರಣೆಗಳ ಪರಾಮರ್ಶೆಯನ್ನು ನಡೆಸಿತು.

ಇವೆಲ್ಲದರಲ್ಲಿ ಮಾಲಿಕರ ಪ್ರತಿನಿಧಿಗಳು ತಮ್ಮದೇ ಸಂಕುಚಿತ ಅಭಿಪ್ರಾಯಗಳನ್ನು ಈ ಅಧಿವೇಶನದಲ್ಲೂ ಎತ್ತಲು ಪ್ರಯತ್ನ ಪಟ್ಟರೂ ಸಫಲರಾಗಲಿಲ್ಲ. ಆಡಳಿತದಲ್ಲಿ ಕಾರ್ಮಿಕರ ಪಾತ್ರದ ಬಗ್ಗೆ ಕಳೆದ ಜನವರಿಯ ವಿಚಾರ ಸಂಕಿರಣದಲ್ಲಿ ಇಂಟಕ್ ತೋರಿದ ಭಿನ್ನಾಭಿಪ್ರಾಯವನ್ನು ಕೂಡಾ ಇಲ್ಲಿಯೂ ಅದು ಎತ್ತಿತ್ತು. ಸಹಜವಾಗಿಯೇ ಮಾಲಿಕರ ಪ್ರತಿನಿಧಿಗಳ ಬೆಂಬಲ ಅವರಿಗೆ ಆದರೆ ಇತರ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಇದನ್ನು ಬಲವಾಗಿ ಟೀಕಿಸಿದರು.

ಕೈಗಾರಿಕಾ ವಿವಾದ ಮಸೂದೆಯನ್ನು ಹಿಂತೆದುಕೊಳ್ಳುವ ಅಗತ್ಯವಿಲ್ಲ. ಕೆಲವು ತಿದ್ದುಪಡಿ ಸಾಕು! ಎನ್ನುತ್ತಿದ್ದ ಇಂಟಕ್ ಈ ಅಧಿವೇಶನದಲ್ಲಿ ಇತರ ಕಾರ್ಮಿಕ ಸಂಘಟನೆಗಳು ಜೊತೆಗೂಡಿ ಈ ಮಸೂದೆಯನ್ನು ಹಿಂತೆಗೆದುಕೊಳ್ಳುವುದನ್ನು ಬೆಂಬಲಿಸಬೇಕಾಯಿತು.

ಕಟ್ಟಡ ನಿರ್ಮಾಣ ಕಾರ್ಮಿಕರ ಕುರಿತು ಶಾಸನಕ್ಕೆ ಸಂಬಂಧಪಟ್ಟಂತೆ ನಿರ್ಮಾಣ ಶ್ರಮಿಕರ ಮಂಡಳಿ ಸ್ಥಾಪಿಸಲು ನಿರ್ಧರಿಸಲಾಯಿತು. ಈ ಮಂಡಳಿ ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಯೋಜನೆಗಳ ಬಗ್ಗೆ ಮಾತ್ರ ಸೀಮಿತಗೊಳ್ಳಬೇಕು ಎಂಬ ಮಾಲಿಕ ಪ್ರಸ್ತಾವವನ್ನು ಸಿ.ಐ.ಟಿ.ಯು ತೀವ್ರವಾಗಿ ಖಂಡಿಸಿತು.

ಸಿ.ಐ.ಟಿ.ಯು. ಪರವಾಗಿ ಈ ಅಧಿವೇಶನದಲ್ಲಿ ಎಂ.ಕೆ.ಫಂಡೆ, ಆರ್.ಉಮಾನಾಥ್, ಕೆ. ರವೀಂದ್ರನಾಥ್ ಪ್ರತಿನಿಧಿಗಳಾಗಿ ಭಾಗವಹಿಸಿದರು. ಮಹ್ಮದ್ ಅಮಿನ್, ಪಿ.ಕೆ. ಗಂಗೂಲಿ, ಜೀವನ್‌ರಾಯ್ ಸಲಹೆಗಾರರಾಗಿ ಭಾಗವಹಿಸಿದರು. ಪಶ್ಚಿಮಬಂಗಾಳದ ಕಾರ್ಮಿಕ ಮಂತ್ರಿ ಶಾಂತಿ ಘಟಕ್ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಎಲ್ಲಾ ವಿಷಯಗಳಲ್ಲಿ ಕಾರ್ಮಿಕ ಸಂಘಗಳ ನಿಲುವನ್ನು ಬೆಂಬಲಿಸಿದರು. ಕೇರಳದ ಕಾರ್ಮಿಕ ಮಂತ್ರಿಯವರೂ ಕೇಂದ್ರ ಕಾರ್ಮಿಕ ಸಂಘಗಳ ಪರ ನಿಲುವು ವಹಿಸಿದರು.

ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳ ಮೂಡಿಸಿದ ಐಕ್ಯ ನಿಲುವಿನಿಂದಾಗಿ ಈ ಅಧಿವೇಶನ ಸಕಾರಾತ್ಮಕ ಫಲ ನೀಡಿದೆ ಎಂದು ಈ ಅಧಿವೇಶನದ ಬಗ್ಗೆ ಎಂ.ಕೆ. ಫಂಡೆ ಅಭಿಪ್ರಾಯ ಪಟ್ಟಿದ್ದಾರೆ. ಈ ಐಕ್ಯತೆಯನ್ನು ಬಲಗೊಳಿಸಬೇಕು. ಆ ಮೂಲಕ ಈ ನಿರ್ಣಯಗಳು ದಕ್ಷ ರೀತಿಯಲ್ಲಿ ಅನುಷ್ಠಾನಕ್ಕೆ ಬಂದು ಕಾರ್ಮಿಕ ವರ್ಗದ ಹಿತಾಸಕ್ತಿಗಳ ರಕ್ಷಣೆಯಾಗಲು ಸಾಧ್ಯ. ದೇಶದ ಪ್ರಜಾಪ್ರಭುತ್ವ ಆಂದೋಲನದಲ್ಲಿ ಕಾರ್ಮಿಕರು ಪರಿಣಾಮಕಾರಿಯಾಗಿ ಭಾಗವಹಿಸಲು ಕಾರ್ಮಿಕ ಸಂಘಟನೆಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ ಮುನ್ನಡೆಸಲು ಕೂಡಾ ಈ ಐಕ್ಯತೆ ನೆರವಾಗುತ್ತದೆ ಎಂದು ಡಾ. ಫಂಡೆ ತಿಳಿಸಿದ್ದಾರೆ.

ಅಧಿವೇಶನದ ಆರಂಭದಲ್ಲಿ ಸಿ.ಐ.ಟಿ.ಯು. ಅಧ್ಯಕ್ಷ ಬಿ.ಟಿ. ರಣದಿವೆ ಹಾಗೂ ಬಿ.ಎಂ.ಎಸ್. ಅಧ್ಯಕ್ಷ ಮಹಾಬರ್‌ಭಾಯಿ ಮೆಹ್ತಾ ಅವರಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿತು.

ಸರ್ಕಾರ ಇನ್ನೂ ಸಾಗಬೇಕಾದ ಹಾದಿ

— ಹರ್ಕಿಶನ್ ಸಿಂಗ್ ಸುರ್ಜಿತ್



ಭಾರತದ ಒಕ್ಕೂಟ ರಚನೆಯಲ್ಲಿನ ವಿಕೃತಿಯನ್ನು ಸರಿಪಡಿಸುವುದು ಪ್ರಜಾಪ್ರಭುತ್ವದ ವಿಸ್ತರಣೆಯ ಇನ್ನೊಂದು ಪ್ರಮುಖ ಅಂಶ. ವಿಭಿನ್ನತೆಯನ್ನಾಧರಿಸಿದ್ದ ಐಕ್ಯತೆಯನ್ನು ಸಂವಿಧಾನದ ಕರ್ತೃಗಳನ್ನು ಕಲ್ಪಿಸಿದ್ದರು. ಇದರರ್ಥ ಭಾರತ ಒಕ್ಕೂಟ ವಿವಿಧ ಧರ್ಮಗಳ ಭಾಷಾ ಗುಂಪುಗಳಿಗೆ,ಜನಾಂಗೀಯ, ಸಾಂಸ್ಕೃತಿಕ, ಚಾರಿತ್ರಿಕ ಹಿನ್ನೆಲೆಯ ಜನರಿರುವ ದೇಶ ಎಂಬ ವಾಸ್ತವವನ್ನು ಗುರುತಿಸುವುದು. ಈ ಆಧಾರದ ಮೇಲೇನೇ ಒಕ್ಕೂಟ

> ಜನರ ವಿವಿಧ ಧಾರ್ಮಿಕ ನಂಬಿಕೆಗಳನ್ನು ಬಳಸಿ ವಿಷ ಹರಡಿ ಜಾತ್ಯಾತೀತತೆಯ ಬುಡಕ್ಕೆ ಏಟು ಕೊಡಲು ವಿವಿಧ ಕೋಮುವಾದಿ, ಪ್ರತ್ಯೇಕತಾವಾದಿ ಶಕ್ತಿಗಳು ಪ್ರಯತ್ನಿಸುತ್ತಿರುವ ಸನ್ನಿವೇಶದಲ್ಲಿ ಕೇಂದ್ರ - ರಾಜ್ಯ ಸಂಬಂಧಗಳ ಪುನರ್ರಚನೆಯ ಪ್ರಶ್ನೆ ಯನ್ನು ನಿರ್ಲಕ್ಷಿಸಿದರೆ ಅದರ ಪರಿಣಾಮ ಅತ್ಯಂತ ಗಂಭೀರ.

ರಚನೆಯನ್ನು ಒಳಗೊಂಡಿದ್ದ ಸಂವಿಧಾನ ರಚಿಸಿ ಭಾರತದೇಶದ ಸ್ಥಾಪನೆಯಾಯಿತು ನಂತರ ಈ ವಾಸ್ತವತೆಗಳನ್ನು ನಿರ್ಲಕ್ಷಿಸಿ ಒಕ್ಕೂಟ (ಫೆಡರಲ್) ನೀತಿಗಳನ್ನು ಉಲ್ಲಂಘಿಸುವ ಅಧಿಕಾರದ ಕೇಂದ್ರೀಕರಣದ ಪ್ರವೃತ್ತಿ ಮೂಡಿಬಂತು. ಇದು ಸರ್ವಾಧಿಕಾರಿ ವಿಕೃತಿ. ಇದನ್ನು ಸರಿಪಡಿಸಬೇಕು.

ಜಾತ್ಯಾತೀತತೆ ಭಾರತದ ಐಕ್ಯತೆಯ ಅಡಿಗಲ್ಲು. ಜನರ ವಿವಿಧ ಧಾರ್ಮಿಕ ನಂಬಿಕೆಗಳನ್ನು ಬಳಸಿ ವಿಷ ಹರಡಿ ಜಾತ್ಯಾ ತೀತತೆಯ ಬುಡಕ್ಕೆ ಏಟು ಕೊಡಲು ವಿವಿಧ ಕೋಮುವಾದಿ, ಪ್ರತ್ಯೇಕತಾವಾದಿ ಶಕ್ತಿಗಳು ಪ್ರಯತ್ನಿಸುತ್ತಿರುವ ಸನ್ನಿವೇಶದಲ್ಲಿ ಕೇಂದ್ರ - ರಾಜ್ಯ ಸಂಬಂಧಗಳ ಪುನರ್ರಚನೆಯ ಪ್ರಶ್ನೆಯನ್ನು ನಿರ್ಲಕ್ಷಿಸಿದರೆ ಅದರ ಪರಿಣಾಮ ಅತ್ಯಂತ ಗಂಭೀರ. ಕಾಶ್ಮೀರ, ಪಂಜಾಬ್, ಅಸ್ಸಾಂ, ಎಲ್ಲೆಲ್ಲೂ ಪ್ರತ್ಯೇಕತಾವಾದಿ ಆಂದೋಲನಗಳು ಮೂಡಿ ಬರುತ್ತಿವೆ. ಕೇವಲ ಬಲಪ್ರಯೋಗದಿಂದ ಇವನ್ನು ಏದುರಿಸಲು ಸಾಧ್ಯವಿಲ್ಲ. ವಿವಿಧ ಜನಗಳ ಸಮಾನತೆಯನ್ನು, ಅವರ ಆಕಾಂಕ್ಷೆಗಳನ್ನು ಮಾನ್ಯಮಾಡಿಯೇ ಈ ಸಮಸ್ಯೆಗಳನ್ನು ಎದುರಿಸಬೇಕು. ಇದೀಗ ದೇಶ ಎದುರಿಸುತ್ತಿರುವ ಅತ್ಯಂತ ಗಂಭೀರ ಸಮಸ್ಯೆ.

ಪ್ರಜಾಪ್ರಭುತ್ವದ ಮರುಸ್ಥಾಪನೆಯಲ್ಲೂ ಈಗಿನ ಸರಕಾರ ಹಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ತಮ್ಮ ಅಗತ್ಯಗಳಿಗೆ ಅನುಕೂಲವಾಗಿ ರಚಿಸಿದ ಅಧಿಕಾರಶಾಹೀ ವ್ಯವಸ್ಥೆ ಈಗಲೂ ಬಹಳ ಬಲವಾಗಿದೆ. ಇದನ್ನು ತಿದ್ದಬೇಕಾದರೆ ಒಂದು ತೀವ್ರ ಪುನರ್ರಚನೆ ಅತ್ಯಗತ್ಯ. ಇದಿಲ್ಲದೆ ಜನರನ್ನು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಒಳಗೊಳ್ಳುವುದಾಗಲಿ ಅಧಿಕಾರಶಾಹಿಯನ್ನು ಸುಧಾರಿಸಲು ಅದರ ಮೇಲೆ ರಾಜಕೀಯ ಮುಖಂಡತ್ವದ ಮೇಲ್ಮೆಯನ್ನು ಪ್ರತಿಷ್ಠಾಪಿಸಿ ಜನತೆಯತ್ತ ಗಮನ ಕೇಂದ್ರೀಕರಿಸುವ ಒಂದು ಹೊಸ ದಿಕ್ಕು, ದೃಷ್ಟಿಕೋನ ನೀಡಬೇಕು.

ಇದೇ ರೀತಿ ನ್ಯಾಯಾಂಗದ ಕಾರ್ಯನಿರ್ವಹಣೆಯೂ ಹದೆಗೆಡುತ್ತಾ ಅದರ ಸ್ವಾತಂತ್ರ ಮತ್ತು ಪ್ರಾಮಾಣಿಕತೆಯೂ ಅವನತಿ ಕಾಣಬರುತ್ತಿದೆ ಅದು ಹೆಚ್ಚೆಚ್ಚಾಗಿ ರಾಜಕೀಯ ಮತ್ತು ಇತರ ಒತ್ತಡಗಳಿಗೆ ಬಲಿಯಾಗುತ್ತಿದೆ ಎಂಬುದು ಕಳೆದ ಕೆಲವು ವರ್ಷಗಳಲ್ಲಿ ನೇಮಕಗೊಂಡ ವಿವಿಧ ಆಯೋಗಗಳ ವರದಿಗಳಿಂದ ಮೇಲುನೋಟಕ್ಕೆ ಕಂಡುಬರುವ ಅಂಶ.

ಹೆಚ್ಚುತ್ತಿರುವ ಹಣಶಕ್ತಿ, ಮತದಾರನ ಮೂಲಕ ವ್ಯಕ್ತವಾದ ಜನತೆಯ ಇಚ್ಛೆಯನ್ನು ತಡೆಯುವಂತಹ ಚುನಾವಣಾ ಸುಧಾರಣೆಗಳನ್ನು ರೂಪಿಸಬೇಕು.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಸೇರಿಕೊಂಡಿರುವ ವಿಕೃತಿಗಳನ್ನು ಸರಿಪಡಿಸಲು, ಪ್ರಜಾಪ್ರಭುತ್ವೀಕರಣ ನಡೆಸಲು ಜನರನ್ನು ಸಕ್ರಿಯವಾಗಿ ಅಣಿನೆರೆಸುವುದು, ಅವರು ಹೆಚ್ಚೆಚ್ಚು ಜಾಗೃತವಾಗಿ, ಮಧ್ಯಪ್ರವೇಶಿಸುವಂತಾಗುವುದು ಅತ್ಯಗತ್ಯ.

ಭ್ರಷ್ಟಾಚಾರ ಆಳವಾಗಿ ಬೇರೂರಿದೆ ಅದು ಸದ್ಯದ ವ್ಯವಸ್ಥೆಯಲ್ಲೇ ಅಡಕವಾದ ಅಂಶ. ದೇಶದ ಆಗುಹೋಗುಗಳ ನಿರ್ಣಯ ಕೈಗೊಳ್ಳುವ ಎಲ್ಲಾ ಉಚ್ಚ ಸಂಸ್ಥೆಗಳನ್ನು ಹೊಕ್ಕಿರುವಾಗ ಅದು

> ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಸೇರಿಕೊಂಡಿರುವ ವಿಕೃತಿಗಳನ್ನು ಸರಿಪಡಿಸಲು, ಪ್ರಜಾಪ್ರಭುತ್ವೀಕರಣ ನಡೆಸಲು ಜನರನ್ನು ಸಕ್ರಿಯವಾಗಿ ಅಣಿನೆರಿಸುವುದು, ಅವರು ಹೆಚ್ಚೆಚ್ಚು ಜಾಗೃತವಾಗಿ, ಮಧ್ಯ ಪ್ರವೇಶಿಸುವಂತಾಗುವುದು ಅತ್ಯಗತ್ಯ.

ಇನ್ನಷ್ಟು ಅಪಾಯಕಾರಿಯಾಗಿಬಿಟ್ಟಿದೆ. ಅತ್ಯುನ್ನತ ಸಿಬ್ಬಂದಿಯನ್ನೊಳಗೊಂಡ ಪ್ರಮುಖ ಭ್ರಷ್ಟಾಚಾರದ ಹಗರಣಗಳನ್ನು ಕುರಿತಂತೆ ತೀವ್ರ ಕ್ರಮ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ, ಇತರರ ಮೇಲೆ ಸರಿಯಾದ ಪ್ರಭಾವ ಬೀರಬಲ್ಲದು.. ಪ್ರಧಾನ ಮಂತ್ರಿಗಳನ್ನು ತನ್ನ ವ್ಯಾಪ್ತಿಯೊಳಗೆ ಸೇರಿಸಿಕೊಂಡಿರುವ ಲೋಕಪಾಲ ಮಸೂದೆ ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಒಂದು ಒಳ್ಳೆಯ ಹೆಜ್ಜೆ.

ಸದ್ಯದ ಪರಿಸ್ಥಿತಿಯಲ್ಲಿ ದೇಶದ ಐಕ್ಯತೆಗೆ ಬಂದಿರುವ ಬೆದರಿಕೆ ಅತ್ಯಂತ ನಿರ್ಣಾಯಕ ಸಮಸ್ಯೆ. ಇದು ದಿನ-ದಿನಕ್ಕೆ ಉಲ್ಬಣಗೊಳ್ಳುತ್ತಿದೆ. ಗಂಭೀರ ಆಯಾಮ ಪಡೆದುಕೊಳ್ಳುತ್ತಿದೆ. ಪಂಜಾಬ್, ಕಾಶ್ಮೀರ, ಅಸ್ಸಾಂನ ಘಟನೆಗಳು ದೊಡ್ಡ ಸವಾಲು ಒಡ್ಡಿದೆ. ರಾಮಜನ್ಮಭೂಮಿ - ಬಾಬ್ರಿ ಮಸೀದಿ ವಿವಾದ ದೇಶದ ಜಾತ್ಯಾತೀತ ಸ್ವರೂಪವನ್ನೇ ಚಿಂದಿಗೊಳಿಸುವ ಅಪಾಯ ಒಡ್ಡಿದೆ. ದೇಶ ಪ್ರೇಮೀ ಜನಗಳನ್ನೆಲ್ಲಾ ಅಣಿನೆರೆಸದಿದ್ದರೆ ನಾವು ಭಾರೀ ಬೆಲೆ ತೆರಬೇಕಾಗುತ್ತದೆ. ಇಂತಹ ಗಂಭೀರ ಬೆದರಿಕೆಯೆದುರು ಉಳಿದೆಲ್ಲಾ ಸಮಸ್ಯೆಗಳು ಹಿನ್ನೆಲೆಗೆ ಸರಿಯುತ್ತವೆ.

ಒಟ್ಟಿನಲ್ಲಿ, ಮೂಲಭೂತ ಧೋರಣೆಗಳಲ್ಲಿ ಬದಲಾವಣೆಯ ದಿಕ್ಕು ಯಾವುದಿರಬೇಕು? ಸದ್ಯದ ವ್ಯವಸ್ಥೆಯ ಚೌಕಟ್ಟಿನೊಳಗೆ ರಾಷ್ಟ್ರೀಯ ರಂಗ ಸರ್ಕಾರ ಜನರ ತುರ್ತಿನ ಆರ್ಥಿಕ ಪ್ರಶ್ನೆಗಳನ್ನು ಎದುರಿಸಬಲ್ಲ, ಅವರಿಗೆ ಪರಿಹಾರ ನೀಡಬಲ್ಲ ತುರ್ತುಧೋರಣೆಗಳನ್ನು ರೂಪಿಸಬೇಕು. ಇವೆಂದರೆ ದೇಶದ ಆರ್ಥಿಕ ಸ್ವಾತಂತ್ರವನ್ನು ರಕ್ಷಿಸುವ ನಮ್ಮ ಮಿಲಿಯಗಟ್ಟಲೆ ರೈತರ ಉತ್ಪಾದನಾ ಸಾಮರ್ಥ್ಯವನ್ನು ಕಟ್ಟಿ ಬೆಳೆಸಬಲ್ಲ ಆರ್ಥಿಕ ಸಾಧನೆಗಳನ್ನು ಒದಗಿಸುವ, ಅಭಿವೃದ್ಧಿಯ ಮೂಲಕ ಉದ್ಯೋಗಾವಕಾಶ ಹೆಚ್ಚಿಸುವ ಧೋರಣೆಗಳು. ಪ್ರಸ್ತುತ ಸಂವಿಧಾನದ ಚೌಕಟ್ಟಿನೊಳಗೆ ಒಕ್ಕೂಟದ ರಚನೆಯನ್ನು ಬಲಪಡಿಸಬೇಕು. ಪ್ರಜಾಪ್ರಭುತ್ವವನ್ನು ವಿಸ್ತರಿಸಲು, ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ರಕ್ಷಿಸಲು ಕ್ರಮ ಕೈಗೊಳ್ಳಬೇಕು. ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವ, ಜಾತ್ಯಾತೀತತೆಯನ್ನು ಕಾಪಾಡುವ ಒಂದು ಸ್ಪಷ್ಟ ಧೋರಣೆ ಬೇಕು. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ ಕೊಲಗಿಸುವ ಕ್ರಮಗಳನ್ನು ರೂಪಿಸಬೇಕು. ಈ ದಿಕ್ಕಿನಲ್ಲಿ ಗಮನಾರ್ಹ ಮುನ್ನಡೆ ಸಾಧಿಸುವುದು ರಾಷ್ಟ್ರೀಯ ರಂಗ ಸರಕಾರಕ್ಕೆ ಸಾಧ್ಯವಾದರೆ ಒಂದು ಪರ್ಯಾಯ ಸಾಧ್ಯ. ಅದರ ಅನುಷ್ಠಾನ ಸಾಧ್ಯ ಎಂಬ ವಿಶ್ವಾಸವನ್ನು ಜನರಲ್ಲಿ ಮೂಡಿಸುವಲ್ಲಿ ಅದೊಂದು ದೊಡ್ಡ ಹೆಜ್ಜೆಯಾಗಬಲ್ಲದು.

ಕಾವೇರಿ ಜಲವಿವಾದ

ಇಂದು ಕರ್ನಾಟಕದ ಕಾವೇರಿ ಬಯಲಿನಲ್ಲಿ ರೈತರು ನಮ್ಮ ಪರಿಸ್ಥಿತಿ ಏನು ಎಂಬ ಗಂಭೀರ ಚಿಂತೆಗೊಳಗಾಗಿದ್ದಾರೆ. ವಿವಿಧ ಖಂಡವಾಳಶಾಹಿ ರಾಜಕೀಯ ಪಕ್ಷಗಳು ನಾಮುಂದು ತಾಮುಂದು ಎಂಬಂತೆ ಸ್ಪರ್ಧಿಸುತ್ತಿವೆ. ಈ ಹಿನ್ನೆಲೆಯಲ್ಲಿ ಕಾವೇರಿ ಜಲವಿವಾದದ ಬಗ್ಗೆ ರಾಜ್ಯ ಕಾರ್ಯದರ್ಶಿ ಮಂಡಳಿ ಅಂಗೀಕರಿಸಿದ ನಿರ್ಣಯವೊಂದನ್ನು ಈಗಾಗಲೇ 'ಐಕ್ಯರಂಗ' ಪ್ರಕಟಿಸಿದೆ.

ಈ ವಿವಾದದ ಬಗ್ಗೆ ಎರಡು ದಶಕಗಳ ಮೊದಲೆ ಪಕ್ಷದ ಕೇರಳ ತಮಿಳುನಾಡು ಕರ್ನಾಟಕ ಘಟಕಗಳು ಕೂಡೆ ಚರ್ಚಿಸಿ ಕೇಂದ್ರ ಸಮಿತಿಯು ಒಪ್ಪಿದ ನಿರ್ಣಯವನ್ನು ಇಲ್ಲಿ ಪ್ರಕಟಿಸಲಾಗಿದೆ. 1924 ರ ಒಪ್ಪಂದದ ಬಗ್ಗೆ ಹಾಗೂ ನಂತರ ವಿವಿಧ ರಾಜ್ಯಗಳ ಪರಿಸ್ಥಿತಿಯ ಬಗ್ಗೆ ಈ ನಿರ್ಣಯ ತೆಗೆದುಕೊಂಡ ನಿಲುವು ಕಾವೇರಿ ಜಲವಿವಾದವನ್ನು ಅರ್ಥ ಮಾಡಿಕೊಳ್ಳಲು ಒಂದು ಅವಶ್ಯ ಹಿನ್ನೆಲೆಯನ್ನು ಒದಗಿಸುತ್ತದೆ.

ಮೈಸೂರು, ತಮಿಳುನಾಡು, ಕೇರಳ ರಾಜ್ಯಗಳೊಳಗೆ ಕಾವೇರಿ ನದೀ ಜಲಕ್ಕೆ ಸಂಬಂಧಿಸಿದಂತೆ ಇರುವಂತಹ ವಿವಾದಗಳ ಕುರಿತು ಭಾರತಕಮ್ಯುನಿಸ್ಟ್ (ಮಾರ್ಕ್ಸಿಸ್ಟ್) ಪಾರ್ಟಿಯ ಕೇರಳ ರಾಜ್ಯ ಸಮಿತಿಯ ಪರವಾಗಿ ಇ.ಎಂ.ಎಸ್. ನಂಬೂದರಿಪಾಡ್, ತಮಿಳುನಾಡು ರಾಜ್ಯ ಸಮಿತಿಯ ಪರವಾಗಿ ಕಾಂ.ಪಿ.ರಾಮಮೂರ್ತಿ, ಕರ್ನಾಟಕ ರಾಜ್ಯಸಮಿತಿಯ ಪರವಾಗಿ ಕಾಂ.ಎಂ. ಎಚ್ ಕೃಷ್ಣಪ್ಪನವರು ಕೇಂದ್ರ ಸಮಿತಿಗೆ ಒಪ್ಪಿಸಿದ ಹೇಳಿಕೆಯನ್ನು, ಬೆಂಗಳೂರಿನಲ್ಲಿ, ತಾ. 24-8-71 ರಿಂದ 29-8-71 ವರೆಗೆ ಸಮಾವೇಶಗೊಂಡಿದ್ದ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಾರ್ಟಿಯ ಕೇಂದ್ರ ಸಮಿತಿಯು ಪರಿಶೀಲಿಸಿ, ಅದನ್ನು ಪ್ರಕಟಿಸಲು ಒಪ್ಪಿಗೆ ನೀಡಿದೆ. ತಮಿಳುನಾಡು ಮತ್ತು ಕೇರಳ ರಾಜ್ಯಗಳೊಳಗೂ ನದೀ ಜಲವಿವಾದಗಳಿಗೆ ಸಂಬಂಧಿಸಿದಂತೆ ಇದೇ ರೀತಿಯ ಒಮ್ಮತದ ಹೇಳಿಕೆಯನ್ನು ರೂಪಿಸಲೇಬೇಕೆಂದು ಕೇಂದ್ರ ಸಮಿತಿಯು ನಿರ್ದೇಶಿಸಿದೆ.

ಹೇಳಿಕೆಯು ಇಂತಿದೆ

ಕಾವೇರಿ ನದಿ ಜಲವಿತರಣೆಗಾಗಿ ತಮಿಳುನಾಡು, ಮೈಸೂರು ಮತ್ತು ಕೇರಳಗಳ ಜನತೆಯ ನಡುವೆ ದ್ವೇಷ ಭಾವನೆಗಳನ್ನು ಉದ್ರೇಕಿಸಲು ಮಾಡುತ್ತಿರುವ ಯತ್ನಗಳು ನಮಗೆ ತೀವ್ರ ಕಳವಳವನ್ನುಂಟುಮಾಡಿದೆ.

ಮದ್ರಾಸು ಮತ್ತು ಮೈಸೂರು ರಾಜ್ಯಗಳಲ್ಲಿ ನೀರಾವರಿ ವಿಸ್ತರಣೆಗಾಗಿ ಕಾವೇರಿ ಜಲವನ್ನು ಬಳಸುವುದರ ಕುರಿತು 1924 ರಲ್ಲಿ, ಆಗಿನ ಮದ್ರಾಸು ಸಂಸ್ಥಾನದ ಮತ್ತು ಮೈಸೂರು ರಾಜ್ಯಗಳೊಳಗೆ ಒಂದು ಒಪ್ಪಂದವಾಗಿತ್ತು. ಅದರ ಮುಖ್ಯ ವರ್ತುಲಗಳು ಇಂತಿವೆ.

1. ಮದ್ರಾಸು ಸರ್ಕಾರವು ಕಾವೇರಿ - ಮೆಟ್ಟೂರು ಜಲಾಶಯದ ನೀರಾವರಿ ಪ್ರದೇಶವನ್ನು 13.01,000 ಎಕರೆಗಳಿಗೆ ಪರಿಮಿತಿಗೊಳಿಸಬೇಕು.

2. ಕೃಷ್ಣರಾಜಸಾಗರದ ನೀರಾವರಿ ಪ್ರದೇಶವನ್ನು 1,25,000 ಎಕರೆಗಳಿಗೆ ವಿಸ್ತರಿಸಲು ಮೈಸೂರು ಸರಕಾರಕ್ಕೆ ಹಕ್ಕಿರುವುದು.

ಇದಲ್ಲದೆ ಕಾವೇರಿನದಿ ಮತ್ತು ಅದರ ಉಪನದಿಗಳಿಗೆ ಜಲಾಶಯ ನಿರ್ಮಿಸಿ, ಇನ್ನೂ 1,10,000 ಎಕರೆ ಪ್ರದೇಶಗಳಿಗೆ ನೀರಾವರಿಯನ್ನು ವಿಸ್ತರಿಸುವ ಹಕ್ಕು ಮೈಸೂರು ಸರ್ಕಾರಕ್ಕಿದೆ.

ಮದ್ರಾಸು ಸಂಸ್ಥಾನದಲ್ಲಿರುವ ಕಾವೇರಿ ನದಿಯ ಉಪನದಿಗಳಾದ ಭವಾನಿ, ಅಮರಾವತಿ ಮತ್ತು ನೊಯ್ಯಿಲ್ ನದಿಗಳಿಗೆ ಜಲಾಶಯ ನಿರ್ಮಿಸುವ ಹಕ್ಕು ಮದರಾಸು ಸರಕಾರಕ್ಕಿದೆ. ಮದರಾಸು ಸರ್ಕಾರವು ಅಂತಹ ಜಲಾಶಯ ರಚಿಸಿದಲ್ಲಿ, ಆಗ ಮೈಸೂರು ಸರಕಾರಕ್ಕೆ ಜಲಾಶಯಗಳ ಪರಿಮಾಣದ ಶೇ 60 ರಷ್ಟು ಪರಿಮಾಣದ ಜಲಾಶಯಗಳನ್ನು ರಚಿಸುವ ಹಕ್ಕಿರುತ್ತದೆ.

ಮೇಲೆ ನಿಷ್ಕರ್ಷಿಸಿದ ಪರಿಮಿತಿ ಮತ್ತು ವ್ಯವಸ್ಥೆಗಳನ್ನು ವರ್ಷಗಳು ಕಳೆದ ಬಳಿಕ ಪುನರ್ವಿಮರ್ಶಿಸಬಹುದಾಗಿದೆ. ಈ ಪುನರ್ವಿಮರ್ಶೆಯನ್ನು ಪರಸ್ಪರ ಸಂಧಾನ ಸಮಾಲೋಚನೆಗಳಿಂದ ಮಾಡಿಕೊಳ್ಳತಕ್ಕುದು, ಸಂಧಾನ ಸಮಾಲೋಚನೆಗಳು ವಿಫಲಗೊಂಡಲ್ಲಿ, ಪರಸ್ಪರರಿಗೆ ಒಪ್ಪಿಗೆಯಿರುವ ಪಂಚಾಯ್ತಿಕೆದಾರರಿಗೆ ಅಥವಾ ಕೇಂದ್ರ ಸರ್ಕಾರದ ಪಂಚಾಯಿತಿಕೆಗೆ ಒಪ್ಪಿಸತಕ್ಕದ್ದು.

ಮೇಲೆ ವಿವರಿಸಿದ ಒಪ್ಪಂದ ವ್ಯವಸ್ಥೆಗಳು 28-2-1974ರವರೆಗೆ ಮುಂದುವರಿಯುವುದು. ಉಭಯತ್ರರಿಗೂ ಒಪ್ಪಿಗೆಯಿರುವಂತಹ ಬದಲಾವಣೆಗಳೊಂದಿಗೆ ಹೊಸ ಒಪ್ಪಂದವಾಗಬೇಕಾಗಿದೆ.

ಈ ಒಪ್ಪಂದದ ಅವಧಿಯಲ್ಲಿ ಮದರಾಸು ಸರಕಾರವು ಕಾವೇರಿ ಮೆಟ್ಟೂರು ಜಲಾಶಯ ಯೋಜನೆಯನ್ನು ಸಂಪೂರ್ಣಗೊಳಿಸಿದೆಯಲ್ಲದೆ, ಭವಾನಿ ಮತ್ತು ಅಮರಾವತಿ ಅಣೆಕಟ್ಟುಗಳನ್ನು ನಿರ್ಮಿಸಿದೆ.

ಮೈಸೂರು ಸರಕಾರವು 1924 ರ ಒಪ್ಪಂದದ ಮೇರೆಗೆ ಒಪ್ಪಿಗೆಯಿತ್ತ ಕೃಷ್ಣರಾಜಸಾಗರ ಜಲಾಶಯವನ್ನು ಮಾತ್ರ ನಿರ್ಮಿಸಿದ್ದು ಬೇರಾವ ಜಲಾಶಯವನ್ನೂ ನಿರ್ಮಿಸಿಲ್ಲ.

1964ರಲ್ಲಿ, ಕಾವೇರಿಯ ಉಪನದಿಯಾದ ಹೇಮಾವತಿಗೆ ಒಂದು ಅಣೆಕಟ್ಟನ್ನು ಹಾಕಿ ಜಲಾಶಯ ನಿರ್ಮಿಸಲು ಮೈಸೂರು ಸರ್ಕಾರ ಯೋಚಿಸಿತ್ತು. ಈ ಯೋಜನೆಯು 1924ರ ಒಪ್ಪಂದದ ಶರತ್ತುಗಳಿಗನುಗುಣವಾಗಿದೆಯೆಂಬ ಬಗ್ಗೆ ಪರಿಶೀಲನೆ ನಡೆಸಲು ಅದರ ವಿವರಗಳನ್ನು ಮದರಾಸು ಸರಕಾರಕ್ಕೆ ಕಳುಹಿಸಿಕೊಡಲಾಗಿತ್ತು.

1967 ರಲ್ಲಿ ಉಭಯ ರಾಜ್ಯಗಳ ಇಂಜಿನಿಯರುಗಳು ಸಮಾಲೋಚನೆ ನಡೆಸಿದರು. ಆ ಬಳಿಕ, 1968 ರಲ್ಲಿ ಕೇಂದ್ರ ನೀರಾವರಿ ಸಚಿವರು ಕರೆದ ಸಭೆಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿಯವರು ಹೇಮಾವತಿ ಯೋಜನೆಗೆ ಒಪ್ಪಿಗೆಯಿತ್ತಿದ್ದರು-ಎಂದು ತಮಿಳುನಾಡು ಶಾಸನ ಸಭಾನಿವೇಶನದ ಮುಂದೆ ಹೇಳಿಕೆ ನೀಡಿದ್ದಾರೆ.

ಆ ಬಳಿಕ ಮೈಸೂರು ರಾಜ್ಯದಲ್ಲಿ ಕಾವೇರಿಯ ಎರಡು ಉಪನದಿಗಳಾದ ಕಪಿನಿ ಮತ್ತು ಹೊನ್ನುಹೊಳೆ (ಸುವರ್ಣಾವತಿ) ಗಳಿಗೆ ಇನ್ನೆರಡು ಅಣೆಕಟ್ಟುಗಳನ್ನು ಕಟ್ಟಲು ಮೈಸೂರು ಸರಕಾರವು ಕಾರ್ಯವನ್ನು ಆರಂಭಿಸಿತು.

ಈ ಮೂರು ಅಣೆಕಟ್ಟುಗಳನ್ನು ಕಟ್ಟಿದರೆ ತಮಿಳುನಾಡಿನಲ್ಲಿರುವ ಕಾವೇರಿ ನೀರಾವರಿ ಭೂಮಿಗಳ ಮೇಲೆ ಪರಿಣಾಮವಾಗುವುದೆಂದು ತಮಿಳುನಾಡು ಸರ್ಕಾರವು ಆಕ್ಷೇಪಿಸಲಾರಂಭಿಸಿತು.

ತದ್ವಿರುದ್ಧ ತಮಿಳುನಾಡು ಸರ್ಕಾರವು 1924 ರ ಶರತ್ತುಗಳನ್ನು ಅತಿಕ್ರಮಿಸಿ ನೀರಾವರಿ ಪ್ರದೇಶದ ಪರಿಮಿತಿಯನ್ನು ಮಿಕ್ಕಿ ಹೋಗಿದೆಯೆಂದು ಮೈಸೂರು ಸರ್ಕಾರವು ಆರೋಪಿಸಿದೆ.

ತಮಿಳುನಾಡು ಸರ್ಕಾರವು ಈ ಆರೋಪಗಳನ್ನು ಅಲ್ಲಗಳೆದಿಲ್ಲ. ಕೇರಳ ರಾಜ್ಯ ರಚನೆಯ ಬಳಿಕ, ಭವಾನಿ ಜಲಾಶಯ ಪ್ರದೇಶದ ಭಾಗವು ಕೇರಳ ರಾಜ್ಯದಲ್ಲಿದ್ದು, ಭವಾನಿಯು ತಮಿಳುನಾಡು ಪ್ರದೇಶಕ್ಕೆ ಪ್ರವೇಶಿಸುವ ಮೊದಲು ಸುಮಾರು 50 ಮೈಲಿ ಕೇರಳ ಪ್ರದೇಶದಲ್ಲಿ ಹರಿಯುತ್ತದೆ. ಕಪಿನಿ ನದಿಯು ಮೈಸೂರು ರಾಜ್ಯವನ್ನು ಪ್ರವೇಶಿಸುವ ಮೊದಲು ಕೇರಳದಲ್ಲಿ ಬಹಳ ದೂರ ಕ್ರಮಿಸುತ್ತದೆ. ವಿದ್ಯುತ್ ಉತ್ಪಾದನೆ ಮತ್ತು ನೀರಾವರಿಗಾಗಿ ಭವಾನಿ ಮತ್ತು ಕಪಿನಿ ನದಿಗಳಿಗೆ ಅಣೆಕಟ್ಟು ಕಟ್ಟಲು ಕೇರಳವು ಯೋಜಿಸಿದೆ. ಹೀಗಾಗಿ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೇರಳಕ್ಕೆ ಕೂಡಲೇ ಸಮ್ಮತಿ ದೊರೆಯಬೇಕಾಗಿದೆ. ಕೇರಳಕ್ಕೆ ಸಿಕ್ಕ ನೀರಿನ ಪ್ರಮಾಣ ಅದರ ಪಾಲಿಗೆ ಅನುಗುಣವಾಗಿಯೇ ಇದೆ.

ಈ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ವಹಿಸಿರುವ ಪ್ರಾಂತ ಆಕ್ಷೇಪಣೀಯವಾಗಿದೆ.

ತಮಿಳುನಾಡು 1924ರ ಒಪ್ಪಂದವನ್ನು ಅತಿಕ್ರಮಿಸಿದೆ ಎಂಬ ಆರೋಪದ ಕುರಿತು ವಿಚಾರಿಸಿ, ಅದನ್ನು ನಿರಾಕರಿಸುವ ಅಥವಾ ದೃಢಪಡಿಸುವ ಸ್ಥಾನದಲ್ಲಿಂದು ಕೇಂದ್ರ ಸರ್ಕಾರವಿದೆ. ಆದರೆ ಅದು ಅಂತಹಕ್ರಮವನ್ನು ಕೈಗೊಳ್ಳದೆ, ಉಭಯರಾಜ್ಯಗಳ ಜನತೆಗಳೊಳಗಿನ ದ್ವೇಷವು ಇನ್ನಷ್ಟು ಬೆಳೆಯುವಂತೆ ಮಾಡುತ್ತಲಿದೆ.

ಅದೇ ವೇಳೆ, ಮೈಸೂರಿನ ಮೇಲಿನ ಮೂರು ಯೋಜನೆಗಳಿಗೆ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದರೂ, ಅವುಗಳ ಕಾಯಾರಂಭಕ್ಕೆ ಇನ್ನೂ ಅನುಮತಿ ಸಿಕ್ಕಿಲ್ಲ. 1924 ರ ಒಪ್ಪಂದಂತೆ ಈ ಹೊಣೆಯು ಕೇಂದ್ರ ಸರ್ಕಾರದ್ದಾಗಿದೆ.

ಕೇಂದ್ರ ಸರ್ಕಾರಕ್ಕೆ ಈ ಮೂರು ರಾಜ್ಯಗಳ ಜನತೆಗಳ ಹಿತಗಳಲ್ಲಿ ಆಸಕ್ತಿಯಿಲ್ಲದೆ, ಅದು ಈ ಸಮಸ್ಯೆಯನ್ನು ತನ್ನ ಪಕ್ಷದ ಸಂಕುಚಿತ ಹಿತದೃಷ್ಟಿಯಿಂದ ಮಾತ್ರ ವೀಕ್ಷಿಸುತ್ತಿದೆ.

ಭಾರತದ ಐಕ್ಯತೆಗೆ ಭಂಗ ತಂದು, ವಿಚ್ಛಿದ್ರಕಾರಿ ಶಕ್ತಿಗಳಿಗೆ ಸಹಾಯಕವಾಗುವಂತಹ ಈ ಧೋರಣೆಯನ್ನು ಅನುಸರಿಸುತ್ತಿರುವ ಕೇಂದ್ರದ ನಿಲುವೆಯನ್ನು ನಾವು ಖಂಡಿಸುತ್ತೇವೆ.

ಉಭಯ ರಾಜ್ಯಗಳ ಮುಖ್ಯಮಂತ್ರಿಗಳು, 1968 ರಲ್ಲಿ ಒಪ್ಪಿಕೊಂಡಂತೆ ಹೇಮಾವತಿ ಯೋಜನೆಯ ನಿರ್ಮಾಣಕ್ಕೆ ಮಂಜೂರಾತಿ ನೀಡುವಂತೆ ನಾವು ಒತ್ತಾಯಿಸುತ್ತೇವೆ. 1924 ರ ಒಪ್ಪಂದಕ್ಕನು

→ ಪುಟ 8

ಅಂಡಮಾನ್ ನಿಕೋಬಾರ್ ಜನತೆಗೆ ಅಭಿನಂದನೆ

ಪುಟ 8 ರಿಂದ

ನಲ್ವತ್ತು ಪಂಚಾಯತುಗಳಲ್ಲಿ 20 ರಲ್ಲಿ ಸಿ.ಪಿ.ಐ. (ಎಂ), 9 ರಲ್ಲಿ ಕಾಂಗ್ರೆಸ್ (ಎಸ್) ಗೆದ್ದಿವೆ. ಆದರೆ ಡಿ.ಎಂ.ಕೆ. ಯಾವ ಪಂಚಾಯತನ್ನೂ ಪಡೆಯಲಿಲ್ಲ. ಗ್ರೇಟ್ ನಿಕೋಬಾರ್‌ನ ಒಂದು ಪಂಚಾಯತಿನಲ್ಲಿ ಸಿ.ಪಿ.ಐ. (ಎಂ) ಒಂದು ಪಂಚಾಯತು ಗೆದ್ದಿವೆ.

ಪಂಚಾಯತು ಪ್ರಧಾನರು ಮತ್ತು ಮುನಿಸಿಪಲ್ ಕೌನ್ಸಿಲರುಗಳ ನಡುವಿನ ಚುನಾವಣೆಗಳಿಂದ ಆರಿಸುವ ಪ್ರದೇಶ ಮಂಡಳಿಯಲ್ಲಿ ಈಗ ಪಕ್ಷದ ಬಲಾಬಲ ಹೀಗಿವೆ. ಸಿ.ಪಿ.ಐ.(ಎಂ)-14 ಕಾಂಗ್ರೆಸ್(ಎಸ್) ಮತ್ತು ಡಿ.ಎಂ.ಕೆ. - ಈ ದ್ವೀಪದ ಲೋಕಸಭಾಸದಸ್ಯರು ಈ ಮಂಡಳಿಯ ಪದನಿಮಿತ್ತ ಸದಸ್ಯರು ಇವರೊಬ್ಬರನ್ನು ಬಿಟ್ಟರೆ ಬೇರೆ ಯಾವ ಕಾಂಗ್ರೆ ಸದಸ್ಯನೂ ಈ ಮಂಡಳಿಯಲ್ಲಿಲ್ಲ.

ಈ ಗೆಲುವು ಸಿ.ಪಿ.ಐ.(ಎಂ) ಈ ದ್ವೀಪಸಮೂಹಗಳಲ್ಲಿ ಸಾಧಿಸಿಕೊಂಡು ಬಂದ ಮುನ್ನಡೆಯ ಫಲ. ಕಳೆದ ಲೋಕಸಭಾ ಚುನಾವಣೆಗಳಲ್ಲಿ ಸಿ.ಪಿ.ಐ. (ಎಂ) ಅಭ್ಯರ್ಥಿ ಎರಡನೇ ಸ್ಥಾನ ಪಡೆದಿದ್ದರು. ಮೂರನೇ ಸ್ಥಾನ ಪಡೆದಿದ್ದ ಡಿ.ಎಂ.ಕೆ. ಬೆಂಬಲಿತ ಕಾಂಗ್ರೆಸ್ (ಎಸ್) ಅಭ್ಯರ್ಥಿ ಹಾಗೂ ಸಿ.ಪಿ.ಐ.(ಎಂ) ಅಭ್ಯರ್ಥಿ ಒಟ್ಟಾಗಿ ಪಡೆದ ಮತಗಳು ಗೆದ್ದ ಕಾಂಗ್ರೆ ಅಭ್ಯರ್ಥಿಗಿಂತ ಹೆಚ್ಚಾಗಿತ್ತು.

ಕಾಂಗ್ರೆಗೆ ಇಂತಹ ತೀವ್ರ ಪರಾಭವ ಉಣ್ಣಿಸಿದ ಪಕ್ಷ ಮತ್ತು ಅದರ ನೇತೃತ್ವದ ರಂಗದಲ್ಲಿ ವಿಶ್ವಾಸ ತೋರಿದ ಈ ದ್ವೀಪಗಳ ಜನತೆಯನ್ನು ಸಿ.ಪಿ.ಐ. (ಎಂ) ಪೊಲಿಟ್‌ಬ್ಯುರೋ ಅಭಿನಂದಿಸಿದೆ.

ವಿಶಾಖ ಪಟ್ಟಣದಲ್ಲಿ ವಿಶಿಷ್ಟ ಪಕ್ಷದ ಶಾಲೆ

ಆಂಧ್ರ ಪ್ರದೇಶದ ಶಾರದಾನದಿಯ ತಟದ ಮೇಲೆ ಅಂಕಪಲ್ಲೆ ಗ್ರಾಮದ ಮಾವಿನ ತೋಪಿನಲ್ಲಿ ಸಿ.ಪಿ.ಐ.(ಎಂ) ವಿಶಾಖಪಟ್ಟಣ ಜಿಲ್ಲಾ ಸಮಿತಿ ಸಂಘಟಿಸಿದ್ದ ಬಹಿರಂಗ ಶಾಲೆ ಒಂದು ವಿಶಿಷ್ಟ ಮಾದರಿಯ ಶಾಲೆಯಾಗಿತ್ತು. ಎಪ್ರಿಲ್ 12 ರಿಂದ 15 ರವರೆಗೆ ನಡೆದ ಈ ಶಾಲೆಯಲ್ಲಿ ಜ್ಞಾನಾರ್ಥಿಗಳು ಭಾಗವಹಿಸಿದರು. ಇಷ್ಟೊಂದು ಭಾರೀ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರೂ ಅತ್ಯಂತ ಶಿಸ್ತಿನಿಂದ ಈ ಶಾಲೆ ನಡೆಯಿತು. ಒಂದೇ ಒಂದು ಮಾವು ಅತ್ತಿತ್ತ ಆಗಲಿಲ್ಲ.

ಸಮಾಜದ ವಿಕಾಸ ಮತ್ತು ಕುರುಡು ನಂಬಿಕೆಗಳು, ರಾಜಕೀಯ ಅರ್ಥಶಾಸ್ತ್ರ, ಸಾಮೂಹಿಕ ಸಂಘಟನೆಗಳು, ಪಕ್ಷದ ಕಾರ್ಯಕ್ರಮ ಮತ್ತು ಅದರ ಮಹತ್ವ, ಜಿಲ್ಲೆಯಲ್ಲಿ ಪಕ್ಷದ ಅನುಭವ ಮತ್ತು ಕಾರ್ಯಭಾರ ಇವು ಈ ತರಗತಿಗಳ ಅಭ್ಯಾಸವಿಷಯಗಳು.

ಈ ತರಗತಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಸಾರ್ವಜನಿಕ ವಲಯದ ನೌಕರರು, ಮಧ್ಯಮ ವರ್ಗದ ನೌಕರರು, ಗೃಹಿಣಿಯರು, ರೈತರು, ಕೃಷಿಕೂಲಿಕಾರರು, ಶಾಲಾ, ಕಾಲೇಜು, ವಿ.ವಿ.ವಿದ್ಯಾರ್ಥಿಗಳು-ಎಲ್ಲರೂ-ಇತ್ತೀಚೆಗೆ ಪಕ್ಷದತ್ತ ಆಕರ್ಷಿತರಾದವರು. ಕಳೆದ ಅಸೆಂಬ್ಲಿ ಚುನಾವಣೆಗಳಲ್ಲಿ ಪಕ್ಷ ಈ ಜಿಲ್ಲೆಯಲ್ಲಿ ಸ್ಪರ್ಧಿಸಿರಲಿಲ್ಲ. ಆದರೆ ಮಾತ್ರ ಪಕ್ಷಗಳಾಗಿ ಪ್ರಚಾರಕ್ಕೆ ಇಳಿಯಿತು-ಪಕ್ಷದ ಪ್ರಭಾವ ಹೆಚ್ಚಿಸುವ ಪ್ರಧಾನ ಗುರಿಯಿಟ್ಟುಕೊಂಡು. ಈ ಶಾಲೆಗೆ ಕನಿಷ್ಟ ಒಂದು ಸಾವಿರ ವಿದ್ಯಾರ್ಥಿಗಳನ್ನು ಪಡೆಯುವ ರೀತಿಯಲ್ಲಿ ಚುನಾವಣಾ ಪ್ರಚಾರ ನಡೆಸಲು ನಿರ್ಧರಿಸಲಾಗಿತ್ತು. ಈ ಪ್ರಯತ್ನಕ್ಕೆ ಸಿಕ್ಕ ಸ್ಪಂದನ ಅದ್ಭುತವಾಗಿತ್ತು. ಈ ಹಿಂದೆ ಎಪ್ರಿಲ್ 1987 ರಲ್ಲಿ ನಡೆಸಿದ ಸಾಮೂಹಿಕ ರಾಜಕೀಯ ಕ್ಯಾಂಪ್‌ನಲ್ಲಿ 800 ಮಂದಿ ಭಾಗವಹಿಸಿದ್ದರು.

ಈ ಬೃಹತ್ ಪ್ರಮಾಣದ ಶಾಲೆಗೆ ಅತ್ಯಂತ ಸಂಯೋಜಿತ ಸಿದ್ಧತೆ ಅತ್ಯಗತ್ಯವಾಗಿತ್ತು. ಇಡೀ ಶಾಲೆಯನ್ನು ವಿಚಾರ ವಿನಿಮಯಕ್ಕಾಗಿ 135 ಗುಂಪುಗಳಾಗಿ ವಿಂಗಡಿಸಲಾಗಿತ್ತು. ಶಾಲೆಯ ಏಕತಾನತೆ ಮುರಿಯಲು ಸಾಂಸ್ಕೃತಿಕ ಸಾಹಿತ್ಯದ, ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸಲಾಗಿತ್ತು.

ದೇಶದೊಳಗೊಂದು ಸುತ್ತು

ಮಧ್ಯಪ್ರದೇಶದ ಬಿ.ಜೆ.ಪಿ. ಸರ್ಕಾರದಡಿಯಲ್ಲಿ ಹರಿಜನ ಗಿರಿಜನರ ಸ್ಥಿತಿ

ಸುದ್ದಿ: ಮಾರ್ಚ್ 11 ರಂದು ಹೋಳಿ ಹಬ್ಬದ ಆಚರಣೆ. ಮಧ್ಯ ಪ್ರದೇಶದ ಶಿವಪುರಿ ಜಿಲ್ಲೆಯ ಸಲ್ಲೆಯಾ ಎಂಬ ಹಳ್ಳಿಯ ಮೇಲೆ ನೆರೆಯ ಗ್ರಾಮದ ಮೇಲ್ಜಾತಿ ಹಿಂದೂಗಳ ಗುಂಪೊಂದು ಧಾಳಿ ಮಾಡಿ ಹರಿಜನರನ್ನು ಬಡಿದು ಹಾಕಿದರು. ಒಬ್ಬ ಹರಿಜನ ಯುವಕ ಸಾವಿಗೀಡಾದ.

ನಿಜ ಸಂಗತಿ: ಗ್ವಾಲಿಯರ್ ರಾಜರ ಆಡಳಿತ ಕಾಲದಲ್ಲಿ ಹೋಳಿ ಹಬ್ಬದಲ್ಲಿ ಮೇಲ್ಜಾತಿ ಗಂಡಸರ ಜತೆ ಹರಿಜನ ಹೆಂಗಸರು ನರ್ತನ ಮಾಡುವ ಪಾಳೇಗಾರಿ ಪದ್ಧತಿಯಿತ್ತು. ಗ್ವಾಲಿಯರ್ ಆಡಳಿತ ಕೊನೆಗೊಂಡ ನಂತರ ಹಲವು ವರ್ಷಗಳಿಂದ ಹರಿಜನ ಮಹಿಳೆಯರು ನರ್ತನ ಮಾಡಲು ನಿರಾಕರಿಸುತ್ತಾ ಬಂದಿದ್ದಾರೆ. ಈ ವರ್ಷ ಶುದ್ಧ ಹಿಂದೂ ಸಂಸ್ಕೃತಿಯ ಪ್ರತಿನಿಧಿಯಾದ ಬಿ.ಜೆ.ಪಿ. ಅಧಿಕಾರದ ಗದ್ದುಗೆಯೇರಿದುದರಿಂದ ರೆಕ್ಕೆ ಬಂದಂತಾದ ಹಿಂದೂ ಮೇಲ್ಜಾತಿ ಗಂಡಸರು ತಮ್ಮ ಪಾಳೇಗಾರಿ ಪದ್ಧತಿಯನ್ನು ಪುನರುಜ್ಜೀವನ ಗೊಳಿಸುವ ಪ್ರಯತ್ನದ ಭಾಗವಾಗಿ ಸಲ್ಲೆಯಾ ಗ್ರಾಮಕ್ಕೆ ನುಗ್ಗಿ "ಸಂಪ್ರದಾಯಿಕ ನರ್ತನಕ್ಕೆ" ಬರಲು ಒತ್ತಾಯಿಸಿದರು. ತಮ್ಮ ಪ್ರಜಾಸತ್ತಾತ್ಮಕ ಹೋರಾಟದ ಭಾಗವಾಗಿ ಸ್ವಲ್ಪ ವಿಮೋಚನೆಗೊಂಡ ಹರಿಜನ ಮಹಿಳೆಯರು ನಿರಾಕರಿಸಿದರು. ಮೇಲ್ಜಾತಿಯ ಗಂಡಸರು ಅವರನ್ನು ಬಲಾತ್ಕಾರವಾಗಿ ಮನೆಗಳಿಂದ ಹೊರಗೆಳೆಯಲು ಆರಂಭಿಸಿದಾಗ ಹೊಡೆದಾಟ ನಡೆಯಿತು. ಹರಿಜನರು ತೀವ್ರವಾಗಿ ಗಾಯಗೊಂಡರು. ಅವರ ಪೈಕಿ ಒಬ್ಬ ಯುವಕ ಮೃತಪಟ್ಟ.

ಮಧ್ಯಪ್ರದೇಶ ವಿಧಾನ ಸಭೆಯಲ್ಲಿ ಈ ವಂಚನೆಯ ಕುರಿತು ತೀವ್ರ ವಾಗ್ಯುದ್ಧ ನಡೆಯಿತು. ಕಾಂಗ್ರೆಸ್(ಐ) ವಿಧಾನ ಸಭಾ ಸದಸ್ಯರು ಈ ವಂಚನೆಯ ಕುರಿತು "ವಿವರಣೆ ಕೊಡಬೇಕೆಂದು ಪಟ್ಟು ಹಿಡಿದಾಗ ಮಧ್ಯಪ್ರದೇಶದ ಬಿ.ಜೆ.ಪಿ. ಮಂತ್ರಿ ಮಂಡಳದ ಗೃಹ ಮಂತ್ರಿ ಶೀತಳಶಾಹಿ "ಮೇಲ್ಜಾತಿ ಗಂಡಸರ ಜತೆಗೂಡಿ ಹರಿಜನ ಸ್ತ್ರೀಯರು ನರ್ತನ ಮಾಡುವುದು ಪದ್ಧತಿ" ಎಂದು ಹೇಳಿಕೆಯನ್ನಿತ್ತರು. ಮತ್ತು ಹೊಡೆದಾಟ ನಡೆಯಲಿಲ್ಲ" ಎಂದೂ ಅವರು ಹೇಳಿದರು. ಆಗ ವಿಧಾನ ಸಭೆಯಲ್ಲಿ ತೀವ್ರ ಕೋಲಾಹಲ ಉಂಟಾಯಿತು.

ಲೋಕಸಭೆಯಲ್ಲಿ: ಹಿಂದಿನ ರೈಲ್ವೆ ಮಂತ್ರಿ ಗ್ವಾಲಿಯರ್‌ನ ಮಾಧವರಾವ್ ಸಿಂಧ್ಯರವರು ಈ ಪ್ರಶ್ನೆಯನ್ನು ಎತ್ತಿದಾಗ, ಮಧ್ಯಪ್ರದೇಶದ ಬಿಜೆಪಿ ಸರ್ಕಾರದ ಹೇಳಿಕೆಯನ್ನು ಓದಿ" ಅಂತಹ ವರ್ತನೆ ನಡೆಯಲಿಲ್ಲ" ಎಂದು ಸಹಾಯಕ ಗೃಹ ಮಂತ್ರಿ ಸುಭೋಧ್‌ಕಾಂತ್ ಹೇಳಿದರು. ಅದೇ ವೇಳೆ. "ನಾನು ಲೋಕ ಸಭೆಯ ಸ್ಪೀಕರರಿಗೆ ತಿಳಿಸಿ ಎಲ್ಲಾ ಪಕ್ಷಗಳ ಪ್ರತಿನಿಧಿಗಳುಳ್ಳ ಲೋಕಸಭಾ ಸದಸ್ಯರ ಒಂದು ತನಿಖಾ ಮಂಡಳಿಯನ್ನು ಮಧ್ಯ ಪ್ರದೇಶದ ಶಿವಪುರ ಜಿಲ್ಲೆಯ 'ಸಲ್ಲೆಯಾ' ಗ್ರಾಮಕ್ಕೆ ಕಳುಹಿಸುತ್ತೇನೆ ಎಂದೂ ಹೇಳಿಕೆಯನ್ನಿತ್ತರು. ಕೇಂದ್ರಕ್ಕೆ ಮಧ್ಯ ಪ್ರದೇಶ ಬಿ.ಜೆ.ಪಿ. ಸರಕಾರ: ಕೇಂದ್ರಕ್ಕೆ ಈ ವಿಷಯದಲ್ಲಿ ಮಾಹಿತಿ ಪತ್ರ ಬರೆದು, "ಈ ವಿಷಯದಲ್ಲಿ ಒಂದು ಲೋಕ ಸಭೆಯ ತನಿಖಾ ಮಂಡಳಿಯನ್ನು ಮಧ್ಯಪ್ರದೇಶದ ಆ ಗ್ರಾಮಕ್ಕೆ ವಸ್ತು ಸ್ಥಿತಿ ತಿಳಿದುಕೊಳ್ಳಲು ಕಳುಹಿಸುವುದು "ಕಾನೂನು ಬಾಹಿರವಾಗುವುದು ಎಂದು ತಿಳಿಸಿದರು.

ಶಿವಪುರಿ ಜಿಲ್ಲೆಯ ಲೋಕ ಸಭಾ ಸದಸ್ಯ: ಇವರು ಬಿ.ಜೆ.ಪಿ. ಪಕ್ಷಕ್ಕೆ ಸೇರಿದವರು. ವಿಧಾನ ಸಭೆಯಲ್ಲಿ ತನ್ನ ಪಕ್ಷದ ಸರಕಾರ ನಡೆದುಕೊಂಡ ವಿಧಾನ ಹಾಗೂ ಕೇಂದ್ರ ಸರಕಾರಕ್ಕೆ ಈ ಘಟನೆಯ ಬಗ್ಗೆ ಕೊಟ್ಟ "ಶುದ್ಧ ಸುಳ್ಳುಗಳ ಹೇಳಿಕೆ"ಯ ಕುರಿತು ಈ ಮಹಾನುಭಾವರಿಗೆ ತೀರಾ ಅಸಮಾಧಾನವುಂಟಾಗಿದೆ.

ಇದು ಒಂದು "ಅಪರೂಪದ ಘಟನೆಯಲ್ಲ. ಇಂತಹ ಘಟನೆಗಳು ಮಧ್ಯ ಪ್ರದೇಶದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೇರಿದ ನಂತರ ಹಲವಾರು ನಡೆದಿವೆ. ಇವುಗಳಲ್ಲೆಲ್ಲಾ ಹರಿಜನರು ಮತ್ತು ಗಿರಿಜನರು ತೀವ್ರ "ದಬ್ಬಾಳಿಕೆ"ಗೆ ಒಳಗಾಗಿದ್ದಾರೆ. "ಬಿಜೆಪಿ ಆಡಳಿತೆಯಡಿಯಲ್ಲಿ ಹರಿಜನರು ಮತ್ತು ಗಿರಿಜನರು ತೀವ್ರ ಅಭದ್ರತೆಗೆ ಒಳಗಾಗಿದ್ದಾರೆ" ಎಂಬುದು ಸಾರ್ವತ್ರಿಕ ಅಭಿಪ್ರಾಯ.

ಮಧ್ಯಪ್ರದೇಶದಲ್ಲಿ ಅರೆಪಾಳೆಯಗಾರಿ ಸ್ಥಿತಿ ಮುಂದುವರಿಯುತ್ತಿವೆ. ಸತತವಾಗಿ ಕಾಂಗ್ರೆಸ್ ಆಡಳಿತೆಯಲ್ಲಿ, ಇದೀಗ ಬಿಜೆಪಿ ಆಡಳಿತೆಯಡಿಯಲ್ಲಿ "ಪಾಳೆಯಗಾರಿ ಶಕ್ತಿಗಳಿಗೆ" ರೆಕ್ಕೆ ಬಂದ ಹಾಗಿದೆ. ಈ ಶಕ್ತಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಭಯೋತ್ಪಾದನಾ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಕೃಷಿ ಕೂಲಿಗಾರರು ಜೀವದಾಳುಗಳ ಸ್ಥಿತಿಗಳಿದಿದ್ದಾರೆ.

"ಸಲ್ಲೆಯಾ" ದ ಘಟನೆ ಒಂದು ವಿರಳವಾದ ಘಟನೆಯಲ್ಲ. ಇದೇ ಮಾರ್ಚ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಇಂತಹ ಹಲವು ಘಟನೆಗಳು ದಾಡಿಯಾ, ಶಾಜಾಪುರ ಮತ್ತು ಮಾಲತ್‌ಪುರ (ಗುನ ಜಿಲ್ಲೆಯಲ್ಲಿ) ದಲ್ಲಿ ನಡೆದಿದ್ದವು. ರೈಸಿನ್ ಜಿಲ್ಲೆಯ ಬುಡ್ ಎಂಬ ಹಳ್ಳಿಯಲ್ಲಿ ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ (ರಾಜ್ಯ ಕೇಂದ್ರ ಭೋಪಾಲ್‌ನಿಂದ ಕೇವಲ ಕಿ.ಮೀ ದೂರದಲ್ಲಿ) ಒಬ್ಬ ಭೂಮಾಲಿಕನು ಒಬ್ಬ ಗಿರಿಜನ ಯುವಕನ ಕೈಗಳನ್ನು ಕಡಿದಿದ್ದನು. ಈ ಬಗ್ಗೆ ಬಿಜೆಪಿ ಸರಕಾರದ ಪೋಲೀಸರು ಏನೂ ಕ್ರಮ ಕೈಗೊಳ್ಳಲಿಲ್ಲ ಎಂಬುದು ಸತ್ಯಸಂಗತಿ.

ರಾಷ್ಟ್ರೀಯ ರಂಗ ಸರಕಾರವು ಲೋಕಸಭಾ ಸದಸ್ಯರ ಒಂದು ತನಿಖಾ ಮಂಡಲಿಯನ್ನು ಮಧ್ಯಪ್ರದೇಶ ರಾಜ್ಯಕ್ಕೆ ಬಿಜೆಪಿ ಲೋಕಸಭಾ ಸದಸ್ಯರ ಮತ್ತು ಬಿಜೆಪಿ ಮಧ್ಯಪ್ರದೇಶ ಸರಕಾರದ ಒತ್ತಡವನ್ನು ಮೀರಿ ಕಳುಹಿಸಲು ನಿರ್ಧರಿಸಿದುದು ನಿಜಕ್ಕೂ ಶ್ಲಾಘನೀಯ ಕಾರ್ಯ.

ಕಾ|| ಬಿಟಲರ್‌ರು ತಮ್ಮ "ಜಾತಿ, ವರ್ಗ ಮತ್ತು ಭೂ ಸಂಬಂಧ" ಎಂಬ ಕೃತಿಯಲ್ಲಿ ಸ್ಪಷ್ಟಪಡಿಸದಂತೆ, "ಪಾಳೆಯಗಾರಿ ಭೂ ಸಂಬಂಧಗಳನ್ನು ಸಂಪೂರ್ಣವಾಗಿ ಬೂದಿ ಮಾಡಿದಾಗ ಮಾತ್ರ ಜಾತಿ ಪದ್ಧತಿಯ ಬುಡಕ್ಕೇನೇ ಕೊಡಲಿ ಏಟು ಹಾಕಬಹುದು. ನಮ್ಮ ದೇಶದಲ್ಲಿ ಹರಿಜನ, ಗಿರಿಜನರ ವಿಮೋಚನೆಗೆ ದಾರಿ ಮುಕ್ತ ಮಾಡಬಹುದು.

ಕೋಮುವಾದದ ವಿರುದ್ಧ ರಾಷ್ಟ್ರೀಯ ಸಮಾವೇಶ

ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ಮೇ 24 ರಂದು ಕೋಮುವಾದ ಮತ್ತು ಪ್ರತ್ಯೇಕತಾವಾದದ ವಿರುದ್ಧ ಒಂದು ರಾಷ್ಟ್ರೀಯ ಸಮಾವೇಶ ನಡೆಯುತ್ತಿದೆ.

ಈ ಸಮಾವೇಶ ನಡೆಸಲು 16 ಮಂದಿಯ ಒಂದು ಸಮಿತಿ ರಚಿಸಲಾಗಿತ್ತು. ಅವರ ಹೆಸರುಗಳು ಹೀಗಿವೆ. ಇ.ಎಂ.ಎಸ್. ನಂಬೂದಿರಿಪ್ಪಾಡ್, ಚಂದ್ರಶೇಖರ್, ಇಂದ್ರಜಿತ್ ಗುಪ್ತ, ದಿನೇಶ್‌ಸಿಂಗ್, ರಾಮ್‌ವಿಲಾಸ್ ಪಾಸ್ವಾನ್, ಸಿ.ರಾಜೇಶ್ವರರಾವ್, ಚಿತ್ತ ಬಸು, ಮೊಹಿಸಿನಾ ಕಿದ್ವಾಯಿ, ಎಂ. ಫಾರುಕಿ, ಸುರೇಂದ್ರಮೋಹನ್, ತ್ರಿದೇಬ್ ಚೌಧುರಿ, ರಾಮಧನ್, ಸೈಯದ್ ಮೀರ್ ಕಾಸಿಂ, ಸಮರ ಮುಖರ್ಜಿ, ಮಾರ್ಗರೆಟ್ ಆಳ್ವ ಮತ್ತು ಹರ್ಕಿಶನ್ ಸಿಂಗ್ ಸುರ್ಜಿತ್.

ಸಕಲೇಶಪುರ

ಸುಮಾರು 50 ಕಾರ್ಯಕರ್ತರು ಮೆರವಣಿಗೆ ನಡೆಸಿ ಉಪ ವಿಭಾಗಾಧಿಕಾರಿಯವರ ಮುಖಾಂತರ ಪ್ರಧಾನ ಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯ್ತು ಕಾಂ. ದೂಜ, ಕಾಂ. ಪಾಲ್ ಪ್ರದರ್ಶನ ನೇತೃತ್ವ ವಹಿಸಿದ್ದರು.

ಬಂಟ್ವಾಳ

ಸಿಪಿಐ(ಎಂ) ಹಾಗೂ ಸಿಪಿಐ ಪಕ್ಷಗಳು ಸಂಯುಕ್ತವಾಗಿ ಧರಣಿ ಸತ್ಯಾಗ್ರಹವನ್ನು ನಡೆಸಿ ಬಂಟ್ವಾಳ ತಾಲ್ಲೂಕು ತಹಸೀಲ್ದಾರರ ಮುಖಾಂತರ ಪ್ರಧಾನಿಯವರಿಗೆ ಮನವಿಯನ್ನು ಸಲ್ಲಿಸಲಾಯ್ತು.

ಈ ಎರಡೂ ಕಮ್ಯುನಿಸ್ಟ್ ಪಕ್ಷಗಳ ನೂರಾರು ಕಾರ್ಯಕರ್ತರು ರೈಲ್ವೆ ನಿಲ್ದಾಣದಿಂದ ಮೆರವಣಿಗೆ ನಡೆಸಿ ತಾಲ್ಲೂಕು ಕಛೇರಿಯ ಮುಂದೆ ಧರಣಿ ನಡೆಸಿದರು. ಧರಣಿ ಸತ್ಯಾಗ್ರಹದ ನಾಯಕತ್ವವನ್ನು ಶ್ರೀ ಬಿ. ವಿಶ್ವನಾಥ ನಾಯ್ಕು, ಹೆನ್ರಿ ಲೋಬೋ, ವಿಠಲ ಬಂಗೇರ, ಆನಂದ, ಸಂಜೀವ ಇವರೂ ಸಿಪಿಐನಿಂದಲೂ, ಕಾಂ. ಬಿ. ವಾಸುಗಟ್ಟಿ ಬಿ.ಸಂಜೀವ ಬಂಗೇರ, ಕೂವಯ್ಯ ಬಂಗೇರ, ಜಿ. ನಾರಾಯಣ, ಬಿಂದಪ್ಪನಾಯ್ಕ ಮೊದಲಾದವರು ಸಿಪಿಐ(ಎಂ)ನಿಂದಲೂ ವಹಿಸಿದ್ದರು. ಅದೇ ಸಂಜೆ 4 ಗಂಟೆಗೆ ಬಂಟ್ವಾಳ ತಾಲ್ಲೂಕು ಸಮಿತಿಯ ಮುಂದೆ ಸಾರ್ವಜನಿಕ ಸಭೆ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಬಿ. ವಾಸುಗಟ್ಟಿ ವಹಿಸಿದ್ದರು.

ಹಾವೇರಿ

ಕಾಂ. ರುದ್ರಪ್ಪಜಾಬಿನ ಮತ್ತು ಗದಿಗೆಪ್ಪ ಚಕ್ಕಲೂರ ಅವರ ನೇತೃತ್ವದಲ್ಲಿ ಜನರು ಪ್ರತಿಭಟನೆ ಮೆರವಣಿಗೆ ನಡೆಸಿ ತಹಶೀಲ್ದಾರರಿಗೆ ಮನವಿ ಪತ್ರವೊಂದನ್ನು ಸಲ್ಲಿಸಿದರು.

ಬಸ್ ಪರವಾನಗಿ ನೀಡಿಕೆಯಲ್ಲಿ ಅರಾಜಕತೆಗೆ ಖಂಡನೆ

ಶಿವಮೊಗ್ಗ ಜಿಲ್ಲೆಯಲ್ಲಿ ಜನರಿಗೆ ಅನುಕೂಲ ಎನ್ನುವ ನೆಪದಿಂದ ಕಾನೂನು ನಿಯಮಗಳನ್ನು ಪಾಲಿಸದೆ, ಒಳಿದು ಮಾರ್ಗದಲ್ಲಿ ಉತ್ತಮ ಸಾರಿಗೆ ವ್ಯವಸ್ಥೆಯಿದ್ದರೂ ಪುನಃ ಅಲ್ಲಿ ಹೊಸ ಬಸ್ಸುಗಳಿಗೆ ಪರವಾನಗಿ ನೀಡುವುದು, ಸಾರಿಗೆ ಕಂಪನಿಗಳ ಭದ್ರತೆಗೆ, ಅದರಲ್ಲಿ ದುಡಿಯುವ ಕಾರ್ಮಿಕರ ಸ್ಥಿತಿಯಲ್ಲಿ ಏರುಪೇರಾಗುವ ಸಾಧ್ಯತೆಯಿರುವುದರಿಂದ ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜನಿಯರಿಂಗ್ ವರ್ಕರ್ಸ್ ಯೂನಿಯನ್, ಶಿವಮೊಗ್ಗ ಘಟಕವು ತೀವ್ರವಾಗಿ ಖಂಡಿಸುವುದು ಚಳುವಳಿಯನ್ನು ಹೂಡಲು ಕಾರ್ಮಕರಿಗೆ ಹಾಗೂ ಮಾಲೀಕರಿಗೆ ಕರೆ ನೀಡಿದೆ.

ಕಾಫಿ ಕ್ಯೂರಿಂಗ್ ಕಾರ್ಮಿಕ ಸಂಘದ ಕಾರ್ಯಕಾರಿ ಸಮಿತಿ ಸಭೆ

ದಿನಾಂಕ 13-5-90 ರಂದು ಕಾರ್ಯಕಾರಿ ಸಮಿತಿಯು ಚಿಕ್ಕಮಗಳೂರಿನ ಸಂಘಧ ಕಛೇರಿಯಲ್ಲಿ ಕಾ.ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಜನವಿರೋಧಿ, ಕಾರ್ಮಿಕ ವಿರೋಧಿ ಸರ್ಕಾರಗಳ ವಿರುದ್ಧ ದನಿಯೆತ್ತಿ ಚಳುವಳಿಗಳನ್ನು ನಡೆಸಲು, ಕಾಫಿ ಕ್ಯೂರಿಂಗ್ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ವಿವರವಾದ ಚರ್ಚೆ ನಡೆಸಿ, ಕನಿಷ್ಠ ಕೂಲಿಯನ್ನು ನೀಡಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಸಭೆಯಲ್ಲಿ ಶ್ರೀಮತಿ ಜಾನಕಮ್ಮ ವಂದಿಸಿ, ಶ್ರೀಮತಿ ಛಾಯಾ ಸ್ವಾಗತಿಸಿದರು.

ಕಾಮ್ರೇಡ್ ಕರ್ತಾರ್ ಚಂದ್

ಪಂಜಾಬಿನ ರೋಪಾರ್ ಜಿಲ್ಲೆಯಲ್ಲಿ ಖಾಲಿಸ್ತಾನಿ ಭಯೋತ್ಪಾದಕರು ಕಾಮ್ರೇಡ್ ಕರ್ತಾರ್ ಚಂದ್‌ರವರ ಕೊಲೆ ನಡೆಸಿರುವುದನ್ನು ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ.

45 ವರ್ಷ ವಯಸ್ಸಿನ ಕಾಮ್ರೇಡ್ ಕರ್ತಾರ್ ಚಂದ್ ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರೂ, ಪಂಜಾಬಿನಲ್ಲಿ ಅಖಿಲಭಾರತ ಕೃಷಿ ಕಾರ್ಮಿಕರ ಸಂಘದ ಪದಾಧಿಕಾರಿಗಳೂ ಆಗಿದ್ದರು.

ಕಾಮ್ರೇಡ್ ಕರ್ತಾರ್ ಚಂದ್ ರಾಷ್ಟ್ರೀಯ ಐಕ್ಯತೆಯ ಮತ್ತು ದುಡಿಯುವ ಜನಗಳ ಹಿತಾಸಕ್ತಿಗಳ ರಕ್ಷಣೆಗೆ ಧೀರ ಹೋರಾಟ ನಡೆಸುತ್ತಾ ಪ್ರಾಣಾರ್ಪಣೆ ಮಾಡಿದ್ದಾರೆ ಎಂದಿರುವ ಪಿ.ಬಿ. ಅವರ ಕುಟುಂಬದ ಸದಸ್ಯರಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಫಿಲಿಫೀನ್ಸ್‌ನಿಂದ ಅಮೆರಿಕನ್ ನೆಲೆಗಳು ಹೊರಕ್ಕೆ?

"ನಾವು ಇಲ್ಲಿ ಇರುವುದು ನಿಮಗೆ ಬೇಡವಾಗಿದ್ದರೆ ನಾವು ಹೋಗುತ್ತೇವೆ...." ಅಮೆರಿಕನ್ ಅಧ್ಯಕ್ಷರ ವಕ್ತಾರರು ಈ ರೀತಿ ಹೇಳಬೇಕಾಯಿತು. ಇದು ಫಿಲಿಪಿನ್ಸ್‌ನಲ್ಲಿರುವ ಕ್ಲಾರ್ಕ್ ವಾಯುಸೇನಾ ನೆಲೆ ಮತ್ತು ಸೂಬಿಕ್' ನೌಕಾನೆಲೆಯ ಬಗ್ಗೆ ಇರುವ ಫಿಲಿಪಿನ್ಸ್ ಮತ್ತು ಅಮೆರಿಕಾದ ನಡುವಣ ಒಪ್ಪಂದ 1991 ಸೆಪ್ಟೆಂಬರ್ 16 ರಂದು ಮುಗಿ ಯುವ ಒಳಗೆ, ಈ ನೆಲೆಗಳನ್ನು ಕಿತ್ತು ಹಾಕಬೇಕೆಂಬ ಫಿಲಿಪಿನ್ಸ್‌ನ ಸರ್ಕಾರ ಮತ್ತು ಜನತೆಯ ಒತ್ತಾಯದ ಹಿನ್ನೆಲೆಯ ಹೇಳಿಕೆ. ಯಾವಾಗಲೂ ಎಲ್ಲಾ ದೇಶಗಳ 'ಪ್ರಜಾಪ್ರಭುತ್ವ' 'ಸ್ವಾತಂತ್ರ' ರಕ್ಷಿ ಸಲಿಕ್ಕೆ ತಮ್ಮ ನೆಲೆಗಳು ಇವೆ ಎಂದು ಕೊಚ್ಚಿಕೊಳ್ಳುವ ವಕ್ತಾರರಿಂದ ಈ ಬಿಚ್ಚು ನುಡಿ ಅಮೆರಿಕನ್ ನೆಲೆಗಳ ಗಂಭೀರ ಸ್ಥಿತಿಯ ಸೂಚಕ.

ಅಮೆರಿಕಾದ ಹೊರಗಿರುವ ಏಳು ದೊಡ್ಡ ನೆಲೆಗಳಲ್ಲಿ ಫಿಲಿಪಿನ್ಸ್ ನೆಲೆ ಅತಿ ದೊಡ್ಡದು. ಈವರೆಗೆ ಫಿಲಿಪಿನ್ಸ್‌ನ್ನು ಹೆಚ್ಚು ಕಡಿಮೆ ವಸಾಹತು ಹಾಗೆ ನೋಡುತ್ತಾ ಬಂದ ಅಮೆರಿಕನ್ ಸರ್ಕಾರಕ್ಕೆ ಇದು ನುಂಗಲಾರದ ತುತ್ತು ಫಿಲಿಪೀನ್ಸ್ ಜನತೆಯ ಕೋಪ ಈ ನೆಲೆಗಳ ಮೇಲೆ, ಅಮೆರಿಕಾದವರ ಮೇಲೆ ಎಚ್ಚಿತ್ತೆಂದರೆ, ಇಬ್ಬರು ಅಮೇರಿಕನ್ ಸೈನಿಕರನ್ನು ಫಿಲಿಪೀನ್ಸ್ ರಾಜಧಾನಿ ಮನಿಲಾದ ಬಳಿ ಕೊಲ್ಲಲಾಯಿತು.

ಒಪ್ಪಂದ ಮುಗಿಯುವ ಒಳಗೆ ಈ ನೆಲೆಗಳನ್ನು ತೆಗೆಯಬೇಕೆಂದು ಫಿಲಿಪೀನ್ಸ್ ಸರ್ಕಾರ ಅಧಿಕೃತ ನೋಟೀಸ್ ಕೊಟ್ಟಿದೆ. ಈ ಬಗ್ಗೆ ಮಾತುಕತೆಗಳು ಆರಂಭವಾಗಿದೆ. ಒಪ್ಪಂದದ ಪ್ರಕಾರ ಒಂದು ವರ್ಷ ನೋಟೀಸು ಅವಧಿ ಸೇರಿ ಸೆಪ್ಟೆಂಬರ್ 1992ರವರೆಗೆ ನೆಲೆಗಳು ಇರಬಹುದು ಎಂದು ಅಮೆರಿಕಾ ವಾದ ಹೂಡಿದೆ. ಆದರೆ ಈಕಲಮನ್ನು ಅಕ್ವಿನೋ ಸರ್ಕಾರ ರದ್ದುಮಾಡಿದೆ ಎಂದು ಫಿಲಿಪೀನ್ಸ್‌ವಾದ ಮಾತುಕತೆಗಳು ಬಿಗಿ ವಾತಾವರಣದಲ್ಲಿ ಆರಂಭವಾಗಿದ್ದು, ಅಮೆರಿಕಾ ನೆಲೆಗಳನ್ನು ಮುಂದುವರಿ ಸುವ ಹೊಸ ಒಪ್ಪಂದಕ್ಕೆ ಹತಾಶ ಪ್ರಯತ್ನ ನಡೆಸುತ್ತಿದೆ. ಆದರೆ ಆ ಸಾಧ್ಯತೆಗಳು ಕಾಣಿಸುತ್ತಿಲ್ಲ. ಅಲ್ಲದೆ ಒಪ್ಪಂದದ ಪ್ರಕಾರ ಅಮೆರಿಕಾ ಕೊಡಬೇಕಾದ 222.5ಮಿಲಿಯ ಡಾಲರುಗಳ ಬಗೆಗೂ ಮಾತುಕತೆ ನಡೆದಿದೆ.

ಈಗಿರುವ ಸೂಚನೆಗಳ ಪ್ರಕಾರ ಅಮೆರಿಕನ್ ನೆಲೆಗಳು ಕಿತ್ತುಹಾಕುವುದು ಅನಿವಾರ್ಯವಾಗಬಹುದು. ದಕ್ಷಿಣ ಪೂರ್ವ ಏಷ್ಯಾದಲ್ಲಿ ಬೇರೆ ಯಾವುದೇ ದೇಶ ಈ ನೆಲೆಯನ್ನು ಸ್ವೀಕರಿಸುವುದಿಲ್ಲ. ಇದು ಈ ಪ್ರದೇಶದಲ್ಲಿ ಶಾಂತಿ ಸ್ಥಾಪಿಸಲು ಎಲ್ಲಾ ಜನಗಳಿಗೆ ತಮ್ಮ ಇಷ್ಟದ ಪ್ರಕಾರ ತಮ್ಮ ದೇಶದ ಭವಿಷ್ಯ ನಿರ್ಧರಿಸುವ ಅವಕಾಶ ಮಾಡಿಕೊಡುತ್ತದೆ. ಸಾಮ್ರಾಜ್ಯಶಾಹಿಗೆ ಇದು ದೊಡ್ಡ ಹಿನ್ನಡೆ.



ಮೇ ತಿಂಗಳ ಆರಂಭದಲ್ಲಿ ಕೇಪ್ ಟೌನಿನಲ್ಲಿ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ ಮತ್ತು ದಕ್ಷಿಣ ಆಫ್ರಿಕಾ ಸರ್ಕಾರದ ನಡುವೆ ಮೂರು ದಿನದ ಮಾತುಕತೆಗಳ ನಂತರ ಪೂರ್ಣ ಪ್ರಮಾಣದ ಮಾತುಕತೆಗಳ ವಿಧಾನದ ಬಗ್ಗೆ ಒಂದು ವ್ಯಾಪಕ ಒಪ್ಪಂದಕ್ಕೆ ಬರಲಾಗಿದೆ ಎಂದು ಸುದ್ದಿ ಬಂದಿದೆ. ಈ ಮಾತುಕತೆಗಳ ನಂತರ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಎ.ಎನ್.ಸಿ. ಮುಖಂಡ ನೆಲ್ಸನ್ ಮಂಡೇಲಾ ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಡಿ ಕ್ಲರ್ಕ್, ಮಾತನಾಡುತ್ತಿರುವುದನ್ನು ಇಲ್ಲಿ ಕಾಣಬಹುದು. ನಮ್ಮ ಕನಸು ನನಸಾಗುತ್ತಿದೆ ಎಂದು ಮಂಡೇಲಾ ಹೇಳಿದರು. ಇದೊಂದು ಮಹತ್ವದ ಮುನ್ನಡೆ ಎಂದು ಡಿ ಕ್ಲರ್ಕ್ ಹೇಳಿರುವುದಾಗಿ ವರದಿಯಾಗಿದೆ.

ಪ.ಜರ್ಮನ್ ಚುನಾವಣೆಗಳಲ್ಲಿ ಬಲಪಂಥೀಯರಿಗೆ ಹೊಡೆತ

ಪ.ಜರ್ಮನಿಯ ರಾಜ್ಯ ಚುನಾವಣೆಗಳಲ್ಲಿ ಆಳುತ್ತಿರುವ ಬಲಪಂಥೀಯ ಕ್ರಿಶ್ಚಿಯನ್ ಡೊಮಾಕ್ರೆಟಿಕ್ ಮತ್ತಿತರ ಪಕ್ಷಗಳಿಗೆ ಸೋಲಾಗಿದೆ. ಒಂದು ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡರೆ ಇತರ ರಾಜ್ಯಗಳಲ್ಲಿ ಸೀಟುಗಳ ಸಂಖ್ಯೆ ಕಡಿಮೆ ಆಗಿದೆ. ನಮ್ಮ ರಾಜ್ಯ ಸಭೆಯಂತಹ ಜರ್ಮನ್ ಮೇಲ್ಮನೆಯಲ್ಲಿ ಆಳುವ ರಂಗ ಬಹುಮತ ಕಳೆದುಕೊಳ್ಳಲಿದೆ. ಪೂರ್ವಜರ್ಮನಿಯಲ್ಲಿ ಕ್ರಿಶ್ಚಿಯನ್ ಡೆಮಾಕ್ರೆಟಿಕ್ ವಿಜಯದಿಂದ ಬೀಗುತ್ತಿದ್ದ ಆಳುವ ಪಕ್ಷಕ್ಕೆ ಇದೊಂದು ದೊಡ್ಡ ಹೊಡೆತ.

ಇದೇ ವರ್ಷ ಡಿಸೆಂಬರ್‌ನಲ್ಲಿ ಫೆಡರಲ್ ಚುನಾವಣೆಗಳು ನಡೆಯಲಿದ್ದು, ಆಳುವ ಪಕ್ಷದ ಗೆಲ್ಲುವ ಸಾಧ್ಯತೆ ಬಗ್ಗೆ ಸಂಶಯ ಉಂಟಾಗಿದೆ. ಆಳುವ ಪಕ್ಷ ಎಷ್ಟು ಹೆದರಿದೆಯೆಂದರೆ ಜರ್ಮನ್ ಐಕ್ಯತೆಯ ಹೆಸರಿನಲ್ಲಿ ಚುನಾವಣೆಗಳನ್ನು ಮುಂದೂಡುವ ಪ್ರಯತ್ನ ಮಾಡಹತ್ತಿದೆ. 'ಐಕ್ಯ' ಜರ್ಮನಿಯಲ್ಲಿ ಚುನಾವಣೆಗಳು ನಡೆಯಬೇಕೆಂದು ಅದು ಹೇಳುತ್ತಿದೆ. ಇದಕ್ಕೆ ಪೂ. ಜರ್ಮನಿಯ ಕ್ರಿಶ್ಚಿಯನ್ ಡೆಮಾಕ್ರಾಟಿಕ್ ಪಕ್ಷದ ವಿರೋಧ ಇದೆ.



ಬೈಜಿಂಗ್ ತಿಯಾನ್‌ಮೆನ್ ಚೌಕದಲ್ಲಿ ಕಳೆದ ವರ್ಷ ಕ್ರಾಂತಿ-ವಿರೋಧಿಯಿಂದ ಚೀನಾವನ್ನು ರಕ್ಷಿಸಿದ ಘಟನೆಯ ಮೊದಲ ವಾರ್ಷಿಕದಂದು ಸೈನಿಕರ ಕವಾಯತು. ಅದನ್ನು ಅನುಕರಿಸಲು ಪ್ರಯತ್ನಿಸುತ್ತಿರುವ ಪುಟ್ಟ ಬಾಲಕಿ

ಫ್ರಾನ್ಸ್‌ನಲ್ಲಿ ಜನಾಂಗಬೇಧದ ಅಲೆ

ಎಲ್ಲಾ ಕಡೆ ಪ್ರಜಾಪ್ರಭುತ್ವದ ಅಲೆ ಏಳುತ್ತಿದ್ದರೆ, ಯುರೋಪಿನಲ್ಲಿ ಪ್ರಜಾಪ್ರಭುತ್ವಕ್ರಾಂತಿಯ ತೊಟ್ಟಿಲಾಗಿದ್ದ ಫ್ರಾನ್ಸ್‌ನಲ್ಲಿ ಜನಾಂಗಭೇದದ ಅಲೆ ಎದ್ದಿದೆ. ಕಳೆದ ಚುನಾವಣೆಯಲ್ಲಿ ಜನಾಂಗಭೇದವನ್ನು ಪ್ರತಿಪಾದಿಸುವ ಪಕ್ಷ ಶೇಕಡಾ 15 ರಷ್ಟುಮತಪಡೆದ ನಂತರ, ಇದಕ್ಕೆ ಕುಮ್ಮಕ್ಕು ಸಿಕ್ಕಿದೆ. ಫ್ರಾನ್ಸಿನ ಮಾಜಿ ವಸಾಹತುಗಳಾದ ಉತ್ತರ ಆಫ್ರಿಕದಿಂದ ಬಂದು ನೆಲೆಸಿರುವ ಈ ಕರಿಯರ ಮೇಲೆ, ಯೆಹೂದಿಗಳ ಮೇಲೆ ಭಾರಿ ಆಕ್ರಮಣ ನಡೆದಿದೆ. ನಿರುದ್ಯೋಗ ಇತರ ಸಮಸ್ಯೆಗಳಿಗೆ ಈ 'ಹೊರಗಿನವರೇ' ಕಾರಣ ಎಂಬ ಅಬ್ಬರದ ಪ್ರಚಾರ ನಡೆದಿದೆ. ಇತ್ತೀಚೆಗೆ ಯೆಹೂದಿಗಳ ಸ್ಮಶಾನದಲ್ಲಿ ಹಲವು ಸಮಾಧಿಗಳ ಮೇಲೆ ಫ್ಯಾಸಿಸ್ಟ್ ಸಂಕೇತ ಸ್ವಸ್ತಿಕಗಳನ್ನು ಬರೆದು, ಕೆಲವು ಸಮಾಧಿಗಳನ್ನು ನಾಶ ಮಾಡಿ, ಕೆಲವು ಇತ್ತೀಚೆಗೆ ಹೂತ ಹೆಣಗಳನ್ನು ಅಗೆದು ತೆಗೆಯುವ ಕಿಡಿಗೇಡಿ ಉತ್ತೇಜಕಕಾರಿ ಕೃತ್ಯಗಳು ಇಡೀ ಫ್ರಾನ್ಸ್‌ನ ಅಂತಸಾಕ್ಷಿಯನ್ನು ಕಲಕಿತು.

ಸೋಶಲಿಸ್ಟ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಮುಂದೆ ನಿಂತು ಈ ಬರ್ಬರ ಕೃತ್ಯದ, ಜನಾಂಗಭೇದ ವಿಷದಂತೆ ಹರಡುತ್ತಿರುವುದರ ವಿರುದ್ಧ ಭಾರಿ ಮತ ಪ್ರದರ್ಶನ ಸಂಘಟಿಸಿದರು. ಇದರಲ್ಲೂ ಜನಾಂಗಭೇದದ ಪಕ್ಷವನ್ನು ಬಿಟ್ಟರೆ ಎಲ್ಲಾ ಪಕ್ಷಗಳು ಭಾಗವಹಿಸಿದ್ದವು. 2 ಲಕ್ಷ ಜನ ಭಾಗವಹಿಸಿದ ಈ ಪ್ರದರ್ಶನ ಎರಡನೆಯ ಮಹಾಯುದ್ಧದ ನಂತರ ಬಾರಿಗೆ ಫ್ರಾನ್ಸಿನ ಅಧ್ಯಕ್ಷ ಸಹ ಭಾಗವಹಿಸುವ ಮೊದಲ ಪ್ರದರ್ಶನವಾಗಿತ್ತು. ಇದರಲ್ಲಿ ಭಾಗವಹಿಸಿದ ಮಹಿಳೆಯೊಬ್ಬಳು ಫ್ರಾನ್ಸ್ ಪ್ರಜಾಪ್ರಭುತ್ವ ಇರುವ ದೇಶ ಎಂದು ಹೇಳಿಕೊಳ್ಳಲು ನಾಚಿಕೆ ಆಗುತ್ತದೆ ಎಂದಳು.

ಬ್ರಿಟನ್ ಮುನಿಸಿಪಲ್ ಚುನಾವಣೆಗಳಲ್ಲಿ ಟೋರಿ ಪರಾಭವ

ಬ್ರಿಟನಿನಲ್ಲಿ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ಥ್ಯಾಚರ್ ನಾಯಕತ್ವದ ಆಳುವ ಟೋರಿ ಪಕ್ಷ ಭಾರಿ ಪರಾಭವ ಕಂಡಿದೆ.ಟೋರಿಗಳಿಗೆ 2 ನಗರ ಕೌನ್ಸಿಲ್‌ಗಳನ್ನು ಮಾತ್ರ ಉಳಿಸಿಕೊಳ್ಳಲು ಸಾಧ್ಯವಾಗಿದ್ದು; ಲೇಬರ್ ಪಕ್ಷ 11 ಹೊಸ ಕೌನ್ಸಿಲ್‌ಗಳಲ್ಲಿ ಗೆದ್ದಿವೆ. ಟೋರಿ ಪಕ್ಷದ 220 ಕೌನ್ಸಿಲರುಗಳುಸೋತಿದ್ದು, ಲೇಬರ್ ಪಕ್ಷದಿಂದ 300 ಹೊಸಕೌನ್ಸಿಲರುಗಳು ಚುನಾಯಿತರಾಗಿದ್ದಾರೆ. ಲೇಬರ್ ಪಕ್ಷ ಶೇಕಡಾ 40 ಮತಪಡೆದರೆ, ಟೋರಿ ಪಕ್ಷ ಶೇಕಡಾ 32 ಮತಮಾತ್ರ ಪಡೆಯಲು ಸಾಧ್ಯವಾಗಿದೆ. ಮೂರನೆಯ 'ಶಕ್ತಿ'ಯಾದ ಸಣ್ಣ ಪಕ್ಷಗಳು ತಮ್ಮ ಪ್ರಭಾವವನ್ನು ಕಳೆದುಕೊಂಡಿದೆ. ಲೇಬರ್ ಪಕ್ಷದಿಂದ ಒಡೆದು ಹೋಗಿದ್ದ ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷ ಹೇಳಹೆಸರಿಲ್ಲದಂತಾಗಿದೆ.

ಥ್ಯಾಚರ್ ಶ್ರೀಮಂತ-ಪರ ನೀತಿಗಳು, ಆರ್ಥಿಕ ದುಸ್ಥಿತಿ ಮತ್ತು ಇತ್ತೀಚೆಗೆ ಹೊರಿಸಿದ ರಾಕ್ಷಸೀ 'ಪೋಲ್ ತೆರಿಗೆ'ಯನ್ನು ಮತದಾರ ನಿರಾಕರಿಸಿದ್ದಾನೆ. ಇದೇ ಸ್ಥಿತಿ ಮುಂದುವರಿದರೆ, ಲೇಬರ್ ಪಕ್ಷ ಜನತೆಯ ಹಿತಾಸಕ್ತಿಗಳ ಬಗ್ಗೆ ಹೋರಾಟ ಮುಂದುವರಿಸಿದರೆ ಮುಂದಿನ ಚುನಾವಣೆಯಲ್ಲಿ ಥ್ಯಾಚರ್ ಸರಕಾರ ಉರುಳಬಹುದು ಎಂದು ನಿರೀಕ್ಷಿಸಲಾಗಿದೆ.

ಕೋರಿಯಾದಿಂದ ಜಪಾನೀ ಕ್ಷಮಾಯಾಚನೆ

ಜಪಾನಿ ಪ್ರಧಾನಿ ಕೊರಿಯಾದ ಅಧ್ಯಕ್ಷರ ಜಪಾನ್ ಪ್ರವಾಸದ ಸಮಯದಲ್ಲಿ ಕೊರಿಯಾದಿಂದ ಅಧಿಕೃತವಾಗಿ ಕ್ಷಮಾಯಾಚನೆ ಮಾಡಲಿದ್ದಾರೆ. ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಜಪಾನ್ ಕೊರಿಯಾದ ಮೇಲೆ ನಡೆಸಿದ ಅತಿಕ್ರಮಣ ಬರ್ಬರ ಕೃತ್ಯಗಳ ಬಗ್ಗೆ ಕ್ಷಮಾಯಾಚನೆ ಮಾಡಬೇಕೆಂದು ಕೊರಿಯಾ ವಾದಿಸುತ್ತಾ ಬಂದಿದೆ. ಆದರೆ ಈ ಕ್ಷಮಾಯಾಚನೆ ಜಪಾನಿ ಚಕ್ರವರ್ತಿ ಮಾಡುತ್ತಾರೋ, ಪ್ರಧಾನಿಯವರೇ ಮಾಡುತ್ತಾರೋ [illegible] ಸ್ಪಷ್ಟವಾಗಿಲ್ಲ.

ಮುಷ್ಕರ ನಿರತ ಕಾರ್ಮಿಕರಿಗೆ ಧಾನ್ಯವಿತರಣೆ

ಕಲಘಟಗಿ ಹಿಂದ್‌ಮಾತಾ ಕಾರ್ಮಿಕರು, ಕಳೆದ ಮಾರ್ಚ್ 22ರಿಂದ ತಮ್ಮ ನ್ಯಾಯ ಸಮ್ಮತ ಬೇಡಿಕೆಗಳಿಗಾಗಿ ಅನಿರ್ದಿಷ್ಟ ಅವಧಿಯ ಮುಷ್ಕರ ಹೂಡಿದ್ದಾರೆ. ಮಾಲೀಕ ವರ್ಗದವರು ಕಾರ್ಮಿಕ ಸಂಘ ಮುರಿದು ಹೋರಾಟವನ್ನು ಹತ್ತಿಕ್ಕಲು ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಮುಷ್ಕರವು 56 ನೇ ದಿನವನ್ನು ತಲುಪಿ, ಕಾರ್ಮಿಕರ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಕಾರ್ಮಿಕರ ಆತ್ಮ ಸ್ಥೈರ್ಯ ಹೆಚ್ಚಿಸಲು, ಧಾರವಾಡ ಜಿಲ್ಲಾಜನರಲ್ ಎಂಪ್ಲಾಯಿಸ್ ಯೂನಿಯನ್ ಕೇಂದ್ರ ಸಮಿತಿಯ ಪರವಾಗಿ ಮುಷ್ಕರ ನಿರತ ಕಾರ್ಮಿಕರಿಗೆ ಜೋಳ ಮತ್ತು ಅಕ್ಕಿ ವಿತರಣೆ ಮಾಡಲಾಯಿತು.

ದಿನಾಂಕ 18-5-90 ರಂದು ಹಿಂದ್ ಮಾತಾ ಕಾರ್ಮಿಕರ ಒಂದು ನಿಯೋಗವು ಹುಬ್ಬಳ್ಳಿಯಲ್ಲಿ ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ಮನವಿ ಸಲ್ಲಿಸಿತ್ತು. ಕಾರ್ಮಿಕರ ಮನವಿಗೆ ಉತ್ತರವಾಗಿ ಕಾರ್ಮಿಕ ಮಂತ್ರಿಗಳಾದ ಶ್ರೀ ಕೆ.ಎಚ್. ಪಾಟೀಲರು ಮಾಲೀಕ ವರ್ಗದವರಿಗೆ ಹಾಗೂ ಸಂಬಂಧಪಟ್ಟ ಕಾರ್ಮಿಕ ಅಧಿಕಾರ ವರ್ಗದವರಿಗೆ ಹತ್ತು ದಿವಸಗಳೊಳಗಾಗಿ ಸಮಸ್ಯೆಯನ್ನು ಈಡೇರಿಸಬೇಕೆಂದು ಇಲ್ಲದಿದ್ದರೆ ಕನಿಷ್ಠ ಅವರಿಗೆ ಮಧ್ಯಂತರ ಪರಿಹಾರವನ್ನಾದರೂ ನೀಡಬೇಕೆಂದು ಆದೇಶಹೊರಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ಬಸ್‌ದರ ಏರಿಕೆ ವಿರುದ್ಧ ವಿದ್ಯಾರ್ಥಿ ಯುವಜನರ ಐಕ್ಯ ಚಳುವಳಿಗೆ ಕರೆ.

ಕರ್ನಾಟಕ ರಾಜ್ಯಸರ್ಕಾರವು ಬಸ್ ಪ್ರಯಾಣ ದರಗಳನ್ನು ವಿಪರೀತವಾಗಿ ಹೆಚ್ಚಿಸಿರುವ ಕ್ರಮವನ್ನು SFI ಕರ್ನಾಟಕ ರಾಜ್ಯ ಸಮಿತಿ ಉಗ್ರವಾಗಿ ಖಂಡಿಸಿರುತ್ತಾರೆ. ಈ ಜನ ವಿರೋಧಿ ನೀತಿಯನ್ನು ಕೈ ಬಿಡುವವರೆಗೂ ಎಲ್ಲಾ SFIನ ಘಟಕಗಳೂ ಪ್ರತಿಭಟಿಸಿ ಮತ ಪ್ರದರ್ಶನ ರಸ್ತಾರೋಕೋ ಮುಂತಾದ ಚಳುವಳಿ ನಡೆಸಲು ಕರೆ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಯುವ ಜನತಾದಳ, AISF, SFI, ಮತ್ತು DYFI ಮುಂತಾದ ಸಂಘಟನೆಗಳೊಂದಿಗೆ ಜಂಟಿಯಾಗಿ ವಿದ್ಯಾರ್ಥಿ ಯುವಜನರ ಚಳುವಳಿ ನಡೆಸಲು ತೀರ್ಮಾನಿಸಿದೆ.

ಯಶಸ್ವಿ ಉಪವಾಸ ಸತ್ಯಾಗ್ರಹ

VSIL ಕಾರ್ಮಿಕ ಸಂಘವು ಇಂಟೀರಿಯರ್ ರಿಲೀಫ್ ಹಾಗೂ ಮ್ಯಾನೇಜ್‌ಮೆಂಟಿನ ಕಿರುಕುಳ (10 ಜನರ ಕೆಲಸವಿರುವಾಗ 5 ಜನರನ್ನು ಬಿಟ್ಟು ಕೆಲಸ ಮಾಡಿಸುವುದು ಇತ್ಯಾದಿ)ಗಳನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ 11-5-90ರಿಂದ ಮುಖ್ಯದ್ವಾರದ ಮುಂದೆ ಕಾರ್ಮಿಕ ಸಂಘದ ಇನ್‌ಚಾರ್ಜ್ ಅಧ್ಯಕ್ಷರಾದ ಕಾಂ ಎಲ್ ರಂಗೇಗೌಡರವರ ನೇತೃತ್ವದಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಹೂಡಿತ್ತು. ದಿನಾಂಕ 15 ರ ಒಳಗೆ 11 ಜನರ ಪರಿಸ್ಥಿತಿ ಗಂಭೀರವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಹೋರಾಟ ಯಶಸ್ವಿಯಾಗಿ [illegible] ಕಾರ್ಮಿಕರಲ್ಲಿ ಹೊಸ ಉತ್ಸಾಹವನ್ನು [illegible]

ಸುದ್ದಿಗಳನ್ನು ವ್ಯಾಖ್ಯಾನಿಸಿ ಅದರ ಮಹತ್ವವನ್ನು ಕಲಿಸಬೇಕು

ಪಕ್ಷದ ಪತ್ರಿಕೆಗಳು ಹೇಗಿರಬೇಕು?

ಎಂಬುದರ ಕುರಿತು ಬಿ.ಟಿ.ಆರ್. ಹೇಳುವರು

ವಿಶ್ವದಾದ್ಯಂತ ನಡೆಯುವ ಘಟನೆಗಳಲ್ಲಿ ಜನತೆಗೆ ಆಸಕ್ತಿಯಿದೆ. ವಿಚಿರೂಪಿಯೂ, ಸಂಕೀರ್ಣತೆಯುಳ್ಳವೂ ಆದ ಆ ಸುದ್ದಿಗಳ ಈ ಅಂಶಗಳನ್ನು, ಒಂದು ಪತ್ರಿಕೆ, ಅದು ಪಕ್ಷದ ಪತ್ರಿಕೆಯಾದರೂ, ಅಲ್ಲದಿದ್ದರೂ ನೈಜ ರೂಪದಲ್ಲಿ ಪ್ರತಿಫಲಿಸದಿದ್ದರೆ ಜನತೆ ಇತರೆ ಪತ್ರಿಕೆಗಳೆಡೆಗೆ ಹೋಗುವರು.

ಸುದ್ದಿಗಳನ್ನು ಬಿಸಿಬಿಸಿಯಾಗಿ ಪ್ರಚಾರಗೊಳಿಸುವುದರೊಂದಿಗೆಯೇ ಅದನ್ನು ವ್ಯಾಖ್ಯಾನಿಸಿ ಜನತೆಯನ್ನು ಅವುಗಳ ಪ್ರಾಮುಖ್ಯತೆಯ ಕುರಿತು ತಿಳುವಳಿಕೆಯುಳ್ಳವರನ್ನಾಗಿಸುವುದು ಪಕ್ಷದ ಪತ್ರಿಕೆಯೊಂದರ ವಿಶೇಷ ಜವಾಬ್ದಾರಿಯಾಗಿದೆ.

ಹೀಗೆ ಮಾಡಬೇಕಾದರೆ ಜನರನ್ನಾಕರ್ಷಿಸಬೇಕು ಜನತೆಯ ಮನಸ್ಸಿನಲ್ಲಿರುವುದು ಕೇವಲ ರಾಜಕೀಯವಲ್ಲ. ಬದುಕಿನ ವೈವಿಧ್ಯಪೂರ್ಣವಾದ ಇತರೆ ರಂಗಗಳಿವೆ. ಅವರೆದುರಿಸುವ ಸಮಸ್ಯೆಗಳನ್ನು ನಾವು ಹೇಗೆ ಪ್ರತಿಫಲಿಸುತ್ತೇವೆ ಎಂಬುವುದು ಮುಖ್ಯ..

★ ★ ★ ★ ★

'ಬಾಂಬೆ ವರ್ಕರ್' ನಲ್ಲಿಯ ತಮ್ಮ ಅನುಭವಗಳ ಕುರಿತು ಅವರು ಹೀಗೆ ಹೇಳುವರು -

ಭಾರತಕ್ಕದು ಸಂಕಷ್ಟಗಳ ದಿನಗಳಾಗಿತ್ತು. ಬಿಕ್ಕಟ್ಟು, ನಿರುದ್ಯೋಗ, ಬಡತನ ಎಲ್ಲೆಡೆಗಳಲ್ಲೂ ನಿರಾಶೆ ತುಂಬಿ ನಿಂತಿತ್ತು. ಬಟ್ಟೆ ಗಿರಣಿಗಳಲ್ಲಿ ಪೂರ್ಣ ಅರಾಜಕತೆ. ಅದರ ಕುರಿತು ನಾನೊಂದು ಕಾಲಂ ಬರೆಯುತ್ತಿದ್ದೆ.

ಕಾರ್ಖಾನೆಯೊಳಗಿನ ಸ್ಥಿತಿಯಲ್ಲಿ ನಿರಾಶಾಭರಿತರಾಗಿದ್ದ ಸಂಘಟಿತ ಕಾರ್ಮಿಕ ವಿಭಾಗ ತಕ್ಷಣ ಪ್ರತಿಕ್ರಿಯಿಸಲಾರಂಭಿಸಿತು. ಕಾರ್ಖಾನೆಯೊಳಗಿನಿಂದಲೇ ಹೊಸ ಸುದ್ದಿಗಳು ಹೊರಬರಲಾರಂಭಿಸಿತು. ಜನತೆಯನ್ನು ಬದಲಾಯಿಸಲು, ಅವರ ಮನಸ್ಸನ್ನು ಸ್ಪಂದಿಸುವಂತೆ ನಾವು ಮಾತನಾಡಬೇಕು ಎಂಬ ಪಾಠವನ್ನು ನಾವೀ ಅನುಭವದಿಂದ ಕಲಿಯಬೇಕಾಗಿದೆ. ಆದರೆ ಇಂದು ಭೌತಿಕ ಸ್ಥಿತಿಗತಿಗಳಲ್ಲಿ ಬದಲಾವಣೆಗಳುಂಟಾಗಿದೆ. ಕಾರ್ಮಿಕ ವರ್ಗದ ಚಳುವಳಿ ಒಂದು ರಾಜಕೀಯ ಶಕ್ತಿಯಾಗಿ ಬೆಳೆದಿದೆ. ಜನರ ಮನೋಭಾವವನ್ನರಿತು ಅವರೊಂದಿಗಿನ ನಿರಂತರ ಸಂಪರ್ಕದಿಂದ ಮಾತ್ರ ಸಂವೇದನೆ ಸಾಧನ.

★ ★ ★ ★ ★

ಇಂದು ನಮಗೆ ಬೇಕಾದದ್ದು, ಐವತ್ತು ವರ್ಷಗಳಿಗೆ ಹಿಂದಿದ್ದ ಪತ್ರಿಕೋದ್ಯಮದ ಶೈಲಿಯಲ್ಲ. ಆ ದಿನಗಳಲ್ಲಿ ವಿಷಯಗಳನ್ನು ನೇರ ಹೇಳಿದ್ದರೆ ಸಾಕಿತ್ತು. ಸೂಚನೆ ಮತ್ತಿತರ ಮಾರ್ಗಗಳಲ್ಲಿ ಜನರ ಮನಸ್ಸನ್ನು ಸೆಳೆಯುವ ಶೈಲಿ ಇಂದಿಗನುಯೋಗ್ಯ.



ಭಾರತದ ವೈಸರಾಯ್ ಆಗಿದ್ದ ರೀಸಿಂಗ್ ಪ್ರಭು ಒಮ್ಮೆ ಹೀಗೆ ಹೇಳಿದ್ದರು. ನಾನು ಚೂರಿಯಿಂದ ಕೊಂದದ್ದಕ್ಕಿಂತ ಹೆಚ್ಚು ಜನರನ್ನು ಜೇನಿನಿಂದ ಕೊಂದಿದ್ದೇನೆ. ಇದೇ ಆಧುನಿಕ ಪತ್ರಿಕೋದ್ಯಮದ ದಾರಿಯಾಗಿದೆ. ಉದಾ: ಅಮೇರಿಕನ್ ವಾರ ಪತ್ರಿಕೆಯಾದ 'ನ್ಯೂಸ್ ವೀಕ್' ಅಮೇರಿಕಾದ ಅತ್ಯಂತ ಪ್ರತಿಗಾಮಿಗಳ ಪತ್ರಿಕೆ. ಅಪ್ಪಟ ಸಾಮ್ರಾಜ್ಯಶಾಹಿ ನೀತಿಯನ್ನು ಅವರು ಪ್ರಚುರಗೊಳಿಸುತ್ತಿರುವರು. ಸಾಮಾನ್ಯ ಓದುಗರೂ ಸೇರಿ ಎಲ್ಲರೂ ತಾನು ಓದುತ್ತಿರುವುದೊಂದು ಪುರೋಗಾಮಿ ಸ್ವತಂತ್ರ ಪತ್ರಿಕೆಯಾಗಿದೆ ಎಂದು ತಿಳಿದುಕೊಳ್ಳುವರು. ಇದುವೇ ಆಧುನಿಕ ಪತ್ರಿಕೋದ್ಯಮದ ರೀತಿ ಎಂದು ಬಿ.ಟಿ.ಆರ್. ವಿವರಿಸಿದರು.

★ ★ ★ ★ ★

ಸಾವಿರಾರು ವರ್ಷಗಳಿಂದ ತುಳಿತಕೊಳ್ಳಪಟ್ಟ ಜನ ಇಂದು ಅವರ ಭಾಷೆಯನ್ನು ಕಲಿಯಲೂ, ತಿಳಿಯಲೂ ಆರಂಭಿಸಿದ್ದಾರೆ. ಆದುದರಿಂದಲೇ ಅವರದನ್ನು ಅಗಾಧವಾಗಿ ಪ್ರೀತಿಸಲೂ ಪ್ರಾರಂಭಿಸಿದ್ದಾರೆ. ಅತ್ಯಂತ ಒಳ್ಳೆಯ ಭಾಷೆಯಲ್ಲಿ ಅವರೊಂದಿಗೆ ಮಾತನಾಡುವವರೊಂದಿಗೆ ಅವರು ಹೋಗುತ್ತಾರೆ.

ವಿಷಯವನ್ನು ಮಾತ್ರ ಮರಗಟ್ಟದ ಭಾಷೆಯಲ್ಲಿ ಹೇಳಿದರೆ ಓದುಗನಿಗೆ ಆಸಕ್ತಿ ಹುಟ್ಟುವುದಿಲ್ಲ. ಭಾಷೆಯನ್ನು ನಾವು ಸಂಸ್ಕರಿಸಲೇಬೇಕು. ಆಕರ್ಷಕಗೊಳಿಸಲೇಬೇಕು. ಆಗ ಮಾತ್ರ ಪತ್ರಿಕೆ ನಿಜವಾದ ಸಂದೇಶವಾಹಕವಾಗಬಲ್ಲದು.

ಇಂದು ಕಾರ್ಮಿಕ ವರ್ಗ ಚಳುವಳಿ ಒಂದು ದೊಡ್ಡ ಶಕ್ತಿಯಾಗಿ ಬೆಳೆದಿರುವ ಈ ಸಂದರ್ಭದಲ್ಲಿ ವಿಶೇಷವಾಗಿ ಪಕ್ಷದ ಪತ್ರಿಕೆಗಳ ಸ್ಥಿತಿ ಹಿಂದಿದ್ದುದಲ್ಲ.

★ ★ ★ ★ ★

ಕಮ್ಯುನಿಸ್ಟ್ ಪತ್ರಿಕೋದ್ಯಮವೆಂದರೆ, ಕೇಂದ್ರ ಸಮಿತಿಯ ಗೊತ್ತುವಳಿಗಳನ್ನು ಅದೇ ರೀತಿ ಪ್ರಕಟಿಸುವುದು ಮಾತ್ರವೇ? ಅಲ್ಲ. ಪಕ್ಷದ ನಿಲುವುಗಳನ್ನು ಯಾಂತ್ರಿಕವಲ್ಲದ ಜೀವಂತಿಕೆಯಿಂದ ಜನತೆಯೆಡೆಗೆ ತಲುಪಿಸಬೇಕು. ಒಳ್ಳೆಯ ಉದಾಹರಣೆಗಳೊಂದಿಗೆ ಸುಂದರವಾದ ಭಾಷೆಯ ಮುಖಾಂತರ ಜನತೆಯೆಡೆಗೆ ಸಂದೇಶಗಳನೊಯ್ಯಬೇಕು.

ಈ ವಾರ...

★ ಆರ್..ಎಸ್.ಎಸ್. ವಿ. ಹೆಚ್. ಪಿ. ನ ಸದಸ್ಯರಂತಹ ಧರ್ಮಾಂಧರು ಮತ್ತು ಕಟ್ಟು ಕೋಮುವಾದಿಗಳು ಟಿಪ್ಪು ಸುಲ್ತಾನರನ್ನು ಮತಾಂಧ ಎಂದು ಆಪಾದಿಸುವುದು ಒಂದು ವಿಡಂಬನೆಯೇ ಸರಿ.

- ಕೆ.ಎನ್. ಪಣಿಕರ್, ಟೈಂಸ್ ಆಫ್ ಇಂಡಿಯಾ, ಮೇ 18

★ ಜರ್ಮನಿಯ ಏಕೀಕರಣದ ಗತಿಯನ್ನು ಬಲವಂತವಾಗಿ ತೀವ್ರಗೊಳಿಸುವ ಪಶ್ಚಿಮ ಜರ್ಮನಿಯ ಯತ್ನದಿಂದಾಗಿ ಪೂರ್ವ ಜರ್ಮನಿಯ ಮಹಾಕೂಟದೊಳಗೆ ತೀವ್ರ ಕಸಿವಿಸಿ ಉಂಟಾಗಿದೆ.

- ಇಕನಾಮಿಕ್ ಟೈಮ್ಸ್, ಮೇ 19

★ ಮೇಲ್ನೋಟಕ್ಕಾದರೂ ಸಾಧಾರಣವೆಂಬಂತೆ ಕಾಣುವ ಸ್ಥಿತಿ ನೆಲೆಗೊಳ್ಳುವತ್ತ ನಿಧಾನ ಪ್ರಗತಿ ಮಿರ್‌ವಾಯಿಝ ಮೌಲ್ವಿ ಫಾರುಕ್ ರವರ ಕೊಲೆಯಿಂದ ನಿಂತಂತಾಗಿದೆ. ಬಹುಶ: ತಿರುಗುಮುರುಗಾಗಿದೆ.

-ಟೈಂಸ್ ಆಫ್ ಇಂಡಿಯಾ ಮೇ 23

★ ಅಧಿಕೃತ ಮೂಲಗಳ ಪ್ರಕಾರ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ವಿಶೇಷ ಪ್ರತಿನಿಧಿ ರಾಬರ್ಟ್ ಗೇಟ್ಸ್ ಅವರು ಉಪಖಂಡಕ್ಕೆ ಭೇಟಿ ನೀಡಿದಾಗ 'ಕಣ್ಣು ಕುಕ್ಕುವಂಥ' ಏನಾದರೊಂದು ಕೆಲಸವನ್ನು ಮಾಡುವಂತೆ ಉಗ್ರವಾದಿಗಳಿಗೆ ಗಡಿಯಾಚೆಯಿಂದ ನಿರ್ದೇಶನ ಬಂದಿತ್ತು. ಆ ನಿರ್ದೇಶನವನ್ನು ಈಗ (ಕಾಶ್ಮೀರ) ಉಗ್ರವಾದಿಗಳು ಪಾಲಿಸಿದಂತಾಗಿದೆ.

ಕನ್ನಡಪ್ರಭ, ಮೇ 23

★ ಚೌತಾಲಾ ರಾಜೀನಾಮೆ ನಂತರ ವಿರೋಧ ಪಕ್ಷದ ನಾಯಕ ಶ್ರೀಯುತ ರಾಜೀವಗಾಂಧಿ ತನ್ನ ಅಮೆಥಿ ಲೋಕಸಭಾ ಸ್ಥಾನಕ್ಕೆ ಇಲ್ಲೀ ಈಗಲೇ ರಾಜೀನಾಮೆ ಕೊಡಲಿ ಎಂದು ಪ್ರಧಾನಮಂತ್ರಿ ಹೇಳಿದ್ದು ಕಾಂಗ್ರೆ ವಿರೋಧ ಪಕ್ಷಕ್ಕೆ ಛಡಿಯೇಟನಂತಾಗಿರಬೇಕು. ನಿನ್ನೆ ಹರ್ಯಾಣದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವ ಕಾಂಗ್ರೆಸ್ (ಐ) ಬೇಡಿಕೆಗೆ ಸರಕಾರದ ಉತ್ತರ ಕೇಳುತ್ತಾ ರಾಜೀವಗಾಂಧಿ ಇದೇ ಪದಪುಂಜ ಬಳಸಿದ್ದರು.

-ಹಿಂದೂ ಮೇ 23

★ ಪಶ್ಚಿಮ ಕರಾವಳಿ ರೈಲ್ವೇ ಕಾರ್ಪೊರೇಶನ್ ಪ್ರಸ್ತಾಪಕ್ಕೆ ರಾಜ್ಯದ ಆಕ್ಷೇಪದಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ. ಅಸಮಾನ ಸಂಪನ್ಮೂಲ ವಿತರಣೆಯಿರುವಾಗ ಕೇಂದ್ರ ವಲಯದ ಪ್ರಾಜೆಕ್ಟುಗಳಿಗೆ ಹಣ ಕಕ್ಕಿ ಎಂದು ಕೇಳಿದರೆ ರಾಜ್ಯಗಳ ಆದಾಗಲೇ ಇಕ್ಕಟ್ಟಾದ ಹಣಕಾಸು ಸ್ಥಿತಿ ಮತ್ತಷ್ಟು ಹದಗೆಡುತ್ತದೆ.

ಡೆಕನ್ ಹೆರಾಲ್ಡ್, ಮೇ 23

★ ರೋಮಾನಿಯಾದಲ್ಲಿ ಅಧ್ಯಕ್ಷೀಯ. ಸ್ಪರ್ಧೆಯಲ್ಲಿ ರಾಷ್ಟ್ರೀಯ ಮುಕ್ತಿರಂಗದ ಮುಖಂಡ ಇಯಾನ್ ಇಲಿಯೆಸ್ಕು ಮತ್ತು ಸಂಸತ್ತಿಗೆ ಆ ರಂಗದ ಅಭ್ಯರ್ಥಿಗಳ ನಿರ್ಣಾಯಕ ವಿಜಯದ ನ್ಯಾಯ ಬದ್ಧತೆಯನ್ನು ಒಪ್ಪಿಕೊಳ್ಳಬೇಕು. ಈ ತೀರ್ಪು ಆಶ್ಚರ್ಯ ಹುಟ್ಟಿಸಿದೆ. ಏಕೆಂದರೆ ಇದು ಪೋಲಂಡ್, ಪೂರ್ವ ಜರ್ಮನಿ ಹಂಗರಿಯಲ್ಲಿ ಇತ್ತೀಚೆಗೆ ಮಾಜಿ ಕಮ್ಯುನಿಸ್ಟರ ಚುನಾವಣಾ ಸೋಲಿಗಿಂತ ಭಿನ್ನವಾಗಿದೆ.

-ಇಂಡಿಯನ್ ಎಕ್ಸ್‌ಪ್ರೆಸ್, ಮೇ 23

★ ಮೊದಲ ಬಾರಿಗೆ ಮರುಚುನಾವಣೆ ಕೊಡಕುಗಳನ್ನೆದುರಿಸಿ ಹಗರಣವಾಗತೊಡಗಿದಾಗಲೇ ಅದು ಸರಕಾರವನ್ನು ಪೇಚಿಗೆ ಸಿಕ್ಕಿಹಾಕಿಸುವ ಅವಕಾಶ ಗೊತ್ತಿದ್ದೂ ಗೊತ್ತಿದ್ದೂ (ಕಾಂಗ್ರೆಸ್ - ಐ) ಕೈಬಿಟ್ಟಿತು. ಮೆಹಂ ಘಟನೆಗಳು ಕೇಂದ್ರದ ಆಡಳಿತ ರಂಗಕ್ಕೆ ಉಂಟು ಮಾಡಿದ ಇರುಸುಮುರುಸಿನ ರಾಜಕೀಯ ಲಾಭ ದಕ್ಕಿಸಿಕೊಳ್ಳುವ ಸಂಕುಚಿತ ದಾರಿ ಹಿಡಿಯಿತು. ಆಗ ನಡೆಯಬೇಕಿಂದಿದ್ದ ಮತಪ್ರದರ್ಶನದ ರದ್ದು ದೇವೀಲಾಲರಲ್ಲಿ ವಿಶ್ವಾಸ ಪಾತ್ರರಂತೆ ರಾಜೀವ್‌ಗಾಂಧಿ ಅವರನ್ನೊಳಗೊಂಡ ವಿವಿಧ ಕಾಂಗ್ರೆ ನಾಯಕರು ನಟಿಸತೊಡಗಿದದು ಜನರ ನೆನಪಿನಲ್ಲಿನ್ನೂ ಇರುವ ನಡುವಳಿಕೆ.

ಪ್ರಜಾವಾಣಿ ಮೇ 23

ಅಂಡಮಾನ್ - ನಿಕೋಬಾರ್ ಕಾಂಗ್ರೆ ಆಳ್ವಿಕೆ ಅಂತ್ಯ

ಸಿ.ಪಿ.ಐ. (ಎಂ) ನೇತೃತ್ವರಂಗದ ಬೃಹತ್ ವಿಜಯ

ಸ್ವಾತಂತ್ರ್ಯದ ನಂತರ ನಿರಂತರವಾಗಿ ಅಧಿಕಾರ ನಡೆಸಿಕೊಂಡು ಬಂದ ಸರ್ವಾಧಿಕಾರಿ ಭ್ರಷ್ಟ ಕಾಂಗ್ರೆಸ್(ಐ)ನ ಅಧಿಕಾರದ ಮೇಲಿನ ಹಿಡಿತ ಅಂಡಮಾನ್ - ನಿಕೋಬಾರ್ ದ್ವೀಪಗಳಲ್ಲೂ ಕೊನೆಗೊಂಡಂತಾಗಿದೆ. ಏಪ್ರಿಲ್ 22 ರಂದು ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಪೂರ್ಣ ಪರಾಭವ ಕಂಡಿದೆ. ಸಿ.ಪಿ.ಐ. (ಎಂ) ನೇತೃತ್ವದ ರಂಗ ಒಂದು ಬೃಹತ್ ರಾಜಕೀಯ ವಿಜಯ ಸಾಧಿಸಿದೆ.

ಅಂಡಮಾನ್ ಜಿಲ್ಲೆಯ ಒಂದು ಮುನಿಸಿಪಾಲಿಟಿ ಮತ್ತು44 ಪಂಚಾಯತುಗಳಿಗೆ ಚುನಾವಣೆ ನಡೆಯಿತು. ಸಿ.ಪಿ.ಐ. (ಎಂ)ಕಾಂಗ್ರೆಸ್ (ಎಸ್) ಮತ್ತು ಡಿ.ಎಂ.ಕೆ. ಒಟ್ಟಾಗಿ ಕಾಂಗ್ರೆಸ್(ಐ)ನ್ನು ಎದುರಿಸಲು ನಿರ್ಧರಿಸಿದ್ದವು.

ಪೋರ್ಟ್ ಬ್ಲೇರ್ ಮುನಿಸಿಪಲ್ ಬೋರ್ಡಿನ 11 ಸ್ಥಾನಗಳಲ್ಲಿ 8 ನ್ನು ಈ ರಂಗ ಗೆದ್ದುಕೊಂಡಿದೆ. ಸಿ.ಪಿ.ಐ.(ಎಂ) ತಾನು ಸ್ಪರ್ಧಿಸಿದ ಎಲ್ಲಾ ನಾಲ್ಕು ಸ್ಥಾನಗಳಲ್ಲಿ ಗೆದ್ದಿತು. ಕಾಂಗ್ರೆಸ್ (ಎಸ್) ಕೂಡಾ ತಾನು ಸ್ಪರ್ಧಿಸಿದ ಮೂರು ಸ್ಥಾನಗಳನ್ನು ಗೆದ್ದುಕೊಂಡಿತು. ಡಿ.ಎಂ.ಕೆ ಮಾತ್ರ ಒಂದರಲ್ಲಿ ಗೆದ್ದು, ಉಳಿದು ಮೂರು ಸ್ಥಾನಗಳು ಕಾಂಗ್ರೆಗೆ ಸಿಗುವಂತಾಯಿತು. ಸಿ.ಪಿ.ಐ.(ಎಂ) ಕಾರ್ಯದರ್ಶಿ ಎನ್. ಬಸುದೇವನ್ ಕಾಂಗ್ರೆಗಿಂತ ದ್ವಿಗುಣ ಮತ ಪಡೆದು ಗೆದ್ದರು. ಇತರ ಸಿ.ಪಿ.ಐ.(ಎಂ) ವಿಜಯಿಗಳು ಹೆಚ್.ಎನ್. ಪರಿಯಾಲ್ ಪಿ.ಎ. ಸಮ್ಮದ್ ಮತ್ತು ಡಿ.ಜಗನ್ನಾಥ್. ಪರಿಯಾಲ್, ಮುನಿಸಿಪಲ್ ಮಂಡಳಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾಗಿದ್ದಾರೆ. ಪುಟ 6ಕ್ಕೆ

ಕಾವೇರಿ ಜಲವಿವಾದ

ಪುಟ 5 ರಿಂದ

ಗುಣವಾಗಿ ಕಪಿನಿ, ಹೊನ್ನಹೊಳೆ ಸುವರ್ಣಾವತಿ ಯೋಜನೆಗಳಿಗೂ ಮಂಜೂರಾತಿ ನೀಡುವಂತೆ ನಾವು ಒತ್ತಾಯಿಸುತ್ತೇವೆ.

ಕಾವೇರಿ ಮತ್ತದರ ಉಪನದಿಗಳು ಹರಿಯುವ ಪ್ರದೇಶದಲ್ಲಿರುವ ನದಿ ನೀರಿನ ಹಕ್ಕನ್ನು ಒಂದೇ ರಾಜ್ಯಕ್ಕೆ ನೀಡಿ, ಮಿಕ್ಕ ರಾಜ್ಯಗಳ ಹಕ್ಕನ್ನು ವಿರೋಧಿಸಿದರೆ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ.

ತಮಿಳುನಾಡು, ಕೇರಳ, ಮೈಸೂರು ಈ ಮೂರು ರಾಜ್ಯಸರ್ಕಾರಗಳೂ ಈಗಿರುವ ನೀರನ್ನು ಹಂಚಿಕೊಳ್ಳುವ ಪ್ರಶ್ನೆಯನ್ನು ಪರಸ್ಪರ ಸೌಹಾರ್ದದಿಂದ ಬಗೆ ಹರಿಸುವ ಬಗ್ಗೆ ಕೂಡಲೇ ಸಂಧಾನ ಸಮಾಲೋಚನೆಯನ್ನು ಆರಂಭಿಸಬೇಕೆಂದು ನಾವು ಒತ್ತಾಯಿಸುತ್ತೇವೆ. 1974 ರ ಫೆಬ್ರವರಿ 28 ರ ಫೆಬ್ರವರಿ ಕಾದುಕುಳಿತುಕೊಳ್ಳದೇ ಈ ಕಾರ್ಯಕ್ಕೆ ಕೂಡಲೇ ತೊಡಗಬೇಕಾದುದು ಮೂರು ರಾಜ್ಯಗಳ ಜನತೆಯ ಹಿತಾಸಕ್ತಿಯ ದೃಷ್ಟಿಯಿಂದ ಅತ್ಯಾವಶ್ಯಕ.

ಮೂರು ರಾಜ್ಯಗಳ ಜನತೆಯೂ ದ್ವೇಷಪೂರಿತ ಸಂಕುಚಿತ ಅಪಪ್ರಚಾರಗಳಿಗೆ ಪ್ರಚೋದನೆಗಳಿಗೆ ಬಲಿಬಿದ್ದು, ಪ್ರಜಾಪ್ರಭುತ್ವ ಚಳುವಳಿಗೆ ಹಾನಿ ತರಬಾರದೆಂದು ನಾವು ವಿನಂತಿಸುತ್ತೇವೆ.

ಆಂಧ್ರದಲ್ಲಿ ಚಂಡಮಾರುತ - ಪಿ.ಬಿ. ದುಖಃ

ಆಂಧ್ರದೇಶದ ಕರಾವಳಿ ಜಿಲ್ಲೆಗಳಲ್ಲಿ ಚಂಡಮಾರುತ ತಂದಿರುವ ತೀವ್ರ ಕಷ್ಟನಷ್ಟಗಳ 'ಬಗ್ಗೆ ಸಿ.ಪಿ.ಐ. (ಎಂ) ಪೊಲಿಟ್‌ಬ್ಯುರೋ ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ. ಅಪಾರ ಪ್ರಾಣಹಾನಿಯಾಗಿದೆ ಲಕ್ಷಾಂತರ ಮಂದಿಯು ಮನೆ- ಮಾರು ಕಳಕೊಂಡಿದ್ದಾರೆ ರಾಜ್ಯಸರಕಾರ ಕೇಂದ್ರಸರಕಾರದ ಸಹಕಾರದೊಂದಿಗೆ ತಕ್ಷಣ ಪರಿಹಾರ ಮತ್ತು ಮರುವಸತಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಸಂತ್ರಸ್ತ ಜನತೆಗೆ ತಕ್ಷಣ ಪರಿಹಾರ ದೊರೆಯುವಂತಾಗಲು ಪರಿಹಾರ ಸಾಮಗ್ರಿಗಳನ್ನು ಬೇಗನೇ ತಲುಪುವಂತಾಗಲು ಸರ್ವಪಕ್ಷ ಸಮಿತಿಗಳನ್ನು ರಚಿಸಬೇಕೆಂದು ಪಿ.ಬಿ. ಕರೆ ನೀಡಿದೆ.

Printed and published by P.Ramachandra Rao on behalf of Communist party of India (Marxist), Karnataka State Committee L-56, K.V.Temple Street, Sultanpet, Bangalore 560 053. Phone No. 75331. Editor: P.RAMACHANDRA RAO